# ಹಜ್ಜ್ ಮತ್ತು ಉಮ್ರಾ ದ ವಿವರಣೆ

صفة الحج والعمرة

[**Kannada –** ಕನ್ನಡ –كنادي ]

**ಅಶ್ಶೈಖ್ ಮುಹಮ್ಮದ್ ಇಬ್ನ್ ಸಾಲಿಹ್ ಅಲ್‌ಉಸೈಮೀನ್ (رحمه الله)**

**محمد بن صالح العثيمين رحمه الله**

**ಅನುವಾದ: ಮುಹಮ್ಮದ್ ಹಂಝಾ ಪುತ್ತೂರು**

**ترجمة: محمد حمزة بتوري**

**1435 – 2014**

www.islamhouse.com

## ಒಳಪುಟಗಳಲ್ಲಿ...


| | | |
|---|---|---|
| | ಪ್ರಸ್ತಾವನೆ | 3 |
| 1. | ಹಜ್ಜ್ ಮತ್ತು ಉಮ್ರಾ ದ ವಿವರಣೆ | 6 |
| 2. | ಉಮ್ರಾದ ಕರ್ಮಗಳು ಸಂಕ್ಷಿಪ್ತವಾಗಿ | 24 |
| 3. | ಹಜ್ಜ್ ಕರ್ಮಗಳು ಸಂಕ್ಷಿಪ್ತವಾಗಿ | 25 |
| 4. | ಹಜ್ಜ್ ಕರ್ಮಗಳ ವಿಧಗಳು | 29 |

بِسْمِ اللهِ الرَّحْمَـنِ الرَّحِيم

# ಪ್ರಸ್ತಾವನೆ

ಸರ್ವಸ್ತುತಿಗಳು ಸರ್ವಲೋಕಗಳ ರಬ್ಬ್ ಆಗಿರುವ ಅಲ್ಲಾಹನಿಗೆ. ಅವನ ಸಲಾತ್ ಮತ್ತು ಸಲಾಮ್ ಅಂಬಿಯಾ ಮುರ್ಸಲೀನ್‌ಗಳಲ್ಲಿ ಅತಿಶ್ರೇಷ್ಠರಾದ ನಮ್ಮ ಪ್ರವಾದಿ ಮುಹಮ್ಮದ್(ﷺ)ರವರ ಮೇಲೆ, ಅವರ ಕುಟುಂಬದ ಮೇಲೆ ಮತ್ತು ಸಹಾಬಾಗಳೆಲ್ಲರ ಮೇಲಿರಲಿ.

ಮುಂದುವರಿದು ಹೇಳುವುದೇನೆಂದರೆ:

ಮುಸ್ಲಿಮ್ ಸಹೋದರಾ,

ಅಲ್ಲಾಹನ ಪವಿತ್ರ ಭವನಕ್ಕೆ ಹಜ್ಜ್ ನಿರ್ವಹಿಸಲು ನಿರ್ಧರಿಸಿದವನೇ, ಅದಕ್ಕಾಗಿ ಸಂಪತ್ತು, ಪರಿಶ್ರಮ, ಸಮಯ ಮತ್ತು ದಿನಗಳನ್ನು ವ್ಯಯಿಸಿದವನೇ, ಕುಟುಂಬ, ಮಕ್ಕಳು, ಪ್ರೀತಿಪಾತ್ರರು ಮತ್ತು ಸಂಬಂಧಿಕರನ್ನು ಬಿಟ್ಟು ಬಂದವನೇ, ಆಡಂಬರದ ಮತ್ತು ಶೃಂಗಾರದ ಉಡುಪುಗಳನ್ನು ಕಳಚಿ, ಕಫನ್‌ನ ಉಡುಪು ಗಳನ್ನು ಹೋಲುವ ಇಹ್ರಾಮ್‌ನ ಉಡುಪುಗಳನ್ನು ಧರಿಸಿದವನೇ, ಇವೆಲ್ಲವೂ ಈ ಮಹಾ ಕಡ್ಡಾಯ ಕರ್ಮವನ್ನು ನೆರವೇರಿಸಲು ಪ್ರಯತ್ನಿಸುವುದಕ್ಕಾಗಿ ಮತ್ತು ಸೃಷ್ಟಿಕರ್ತನಾದ ಅಲ್ಲಾಹು ಸುಬ್‌ಹಾನಹು ವ ತಆಲಾ ನ ಸಂತೃಪ್ತಿಯನ್ನು ಅರಸಿಕೊಂಡಾಗಿದೆ. ಯಾಕೆಂದರೆ ಮುತ್ತಫಕುನ್ ಅಲೈಹಿ ಆಗಿರುವ ಹದೀಸಿನಲ್ಲಿ ಪ್ರವಾದಿ(ﷺ)ರವರು ಹೇಳಿದಂತೆ:

« الْحَجُّ الْمَبْرُورُ لَيْسَ لَهُ جَزَاءٌ إِلَّا الْجَنَّةُ »

**“ಮಬ್ರೂರ್ ಆಗಿರುವ ಹಜ್ಜ್, ಅದಕ್ಕೆ ಸ್ವರ್ಗದ ಹೊರತು ಬೇರೆ ಪ್ರತಿಫಲವಿಲ್ಲ.” [ಅಲ್‌ಬುಖಾರೀ ಮತ್ತು ಮುಸ್ಲಿಮ್]** ಎಂಬುದನ್ನು ನೀನು ಅರಿತುಕೊಂಡಿರುವ ಕಾರಣದಿಂದಾಗಿದೆ.

ಮತ್ತು ಪ್ರವಾದಿ(ﷺ)ರವರು ಹೇಳಿದರು:

« مَنْ حَجَّ فَلَمْ يَرْفَثْ وَلَمْ يَفْسُقْ رَجَعَ كَيَوْمِ وَلَدَتْهُ أُمُّهُ »

**“ಯಾರಾದರೂ ಅಶ್ಲೀಲ ಮಾತುಗಳನ್ನಾಡದೆ, ಆಜ್ಞೋಲ್ಲಂಘನೆಗಳನ್ನು ಮಾಡದೆ, ಹಜ್ಜ್ ನಿರ್ವಹಿಸಿದರೆ ಅವನು ಅವನ ತಾಯಿ ಅವನನ್ನು ಹೆತ್ತ ದಿನದಂತೆ (ಅಂದರೆ ಪಾಪ ಮತ್ತು ದೋಷಗಳಿಂದ ಸಂಪೂರ್ಣ ಶುದ್ಧನಾಗಿ) ಮರಳುವನು.” [ಅಲ್‌ಬುಖಾರೀ ಮತ್ತು ಮುಸ್ಲಿಮ್]**

ಅಲ್‌ಬುಖಾರೀ ಆಯಿಶಾ(ﷺ)ರಿಂದ ವರದಿ ಮಾಡಿದ ಹದೀಸಿನಲ್ಲಿ ಆಯಿಶಾ (ﷺ)ರವರು ಹೇಳುತ್ತಾರೆ:

يَا رَسُولَ اللَّهِ، نَرَى الْجِهَادَ أَفْضَلَ الْعَمَلِ، أَفَلَا نُجَاهِدُ؟

**“ಓ ಅಲ್ಲಾಹನ ರಸೂಲರೇ, ನಾವು ಜಿಹಾದನ್ನು ಅತಿಶ್ರೇಷ್ಠ ಕರ್ಮವನ್ನಾಗಿ ಕಾಣುತ್ತಿದ್ದೇವೆ. ಹಾಗಾದರೆ ನಾವು ಜಿಹಾದ್ ಮಾಡಬಾರದೇ?”**

ಪ್ರವಾದಿ(ﷺ)ರವರು ಹೇಳಿದರು:

« وَلَكِنْ أَفْضَلُ الْجِهَادِ حَجٌّ مَبْرُورٌ »

**“ಆದರೆ ಅತಿಶ್ರೇಷ್ಠ ಜಿಹಾದ್ ಮಬ್ರೂರ್ ಆಗಿರುವ ಹಜ್ಜ್ ಆಗಿದೆ.” [ಅಲ್‌ಬುಖಾರೀ]**

ಮಬ್ರೂರ್ ಆಗಿರುವ ಹಜ್ಜ್ ಎಂದರೆ ಪ್ರವಾದಿ(ﷺ)ರವರು ತಮ್ಮ ಹಜ್ಜ್‌ನಲ್ಲಿ ನಿರ್ವಹಿಸಿದಂತೆ ಅವರ ಚರ್ಯೆಗೆ ಅನುಗುಣವಾಗಿರುವ ಹಜ್ಜ್ ಆಗಿದೆ. ಯಾಕೆಂದರೆ ಪ್ರವಾದಿ(ﷺ)ರವರು ಹೇಳಿದರು:

« لِتَأْخُذُوا عَنِّي مَنَاسِكَكُمْ »

**“ನೀವು ನಿಮ್ಮ ಹಜ್ಜ್ ಕರ್ಮಗಳನ್ನು ನನ್ನಿಂದ ಪಡೆದುಕೊಳ್ಳಿರಿ.” [ಮುಸ್ಲಿಮ್]**

ಈ ಕಾರಣದಿಂದಲೇ ಪ್ರವಾದಿ(ﷺ)ರವರ ಸುನ್ನತ್ತಿನ ಪ್ರಕಾರವಿರುವ ಹಜ್ಜನ್ನು ವಿವರಿಸಿಕೊಡಲು ನಾವು ಇಷ್ಟಪಟ್ಟೆವು. ಇದಕ್ಕಾಗಿ ನಾವು ಫದೀಲತು ಶೈಖ್ ಮುಹಮ್ಮದ್ ಇಬ್ನ್ ಸಾಲಿಹ್ ಅಲ್‌ಉಸೈಮೀನ್ –ರಹಿಮಹುಲ್ಲಾಹ್– ರವರ ಮಾತುಗಳನ್ನು ಆರಿಸಿಕೊಂಡಿದ್ದೇವೆ.

ನಿನ್ನ ಹಜ್ಜ್ ಮಬ್ರೂರ್ ಆಗಿರಲು, ನಿನ್ನ ಪಾಪವು ಕ್ಷಮಿಸಲ್ಪಡಲು ಮತ್ತು ನಿನ್ನ ಪ್ರಯತ್ನವು ಕೃತಜ್ಞತೆಯನ್ನು ಪಡೆಯಲು ನಾವು ಅಲ್ಲಾಹು ತಆಲಾ ನೊಂದಿಗೆ ಪ್ರಾರ್ಥಿಸುತ್ತೇವೆ.

# ಹಜ್ಜ್ ಮತ್ತು ಉಮ್ರಾ ದ ವಿವರಣೆ

ಅಶ್ಶೈಖ್ ಮುಹಮ್ಮದ್ ಇಬ್ನ್ ಸಾಲಿಹ್ ಅಲ್‌ಉಸೈಮೀನ್ –ರಹಿಮಹು ಲ್ಲಾಹ್– ಹೇಳುತ್ತಾರೆ:

ನಾವು ಇಲ್ಲಿ ಹಜ್ಜ್‌ನ ವಿವರಣೆಯನ್ನು ಸಂಕ್ಷಿಪ್ತವಾಗಿ ವಿವರಿಸುತ್ತೇವೆ. ಹಜ್ಜು ತ್ತಮತ್ತುಅ್ ಅನ್ನು ವಿವರಿಸುತ್ತಾ ನಾವು ಹೀಗೆನ್ನುತ್ತೇವೆ:

ಒಬ್ಬ ವ್ಯಕ್ತಿ ಹಜ್ಜ್ ಅಥವಾ ಉಮ್ರಾವನ್ನು ನಿರ್ವಹಿಸಲು ಉದ್ದೇಶಿಸಿದರೆ, ಅವನು ಹಜ್ಜ್‌ನ ತಿಂಗಳುಗಳಲ್ಲಿ ಮಕ್ಕಾದೆಡೆಗೆ ಹೊರಡಬೇಕಾಗಿದೆ. ಅತಿಶ್ರೇಷ್ಠ ವಾದ ವಿಧಾನವು ಹಜ್ಜು ತ್ತಮತ್ತುಅ್ ನಿರ್ವಹಿಸುವುದಾಗಿದೆ. ಇದಕ್ಕಾಗಿ ಮೊಟ್ಟ ಮೊದಲು ಉಮ್ರಾಕ್ಕಾಗಿ ಇಹ್ರಾಮ್ ಮಾಡಬೇಕು.

ಉಮ್ರಾ ನಿರ್ವಹಿಸುವುದಕ್ಕಾಗಿ ಮೀಕಾತ್‌ನಲ್ಲಿ ಇಹ್ರಾಮ್ ಮಾಡಬೇಕು. ಇಹ್ರಾಮ್ ಮಾಡುವಾಗ ಜನಾಬತ್‌ನ ಸ್ನಾನ ಮಾಡುವಂತೆ ಸ್ನಾನ ಮಾಡ ಬೇಕು. ಸ್ನಾನ ಮಾಡುವುದು ಪುರುಷರಿಗೆ ಮತ್ತು ಋತುಸ್ರಾವ ಹಾಗೂ ಹೆರಿಗೆ ರಕ್ತವಿರುವ ಸ್ತ್ರೀಯರಿಗೂ ಸುನ್ನತ್ತಾಗಿದೆ. ಸ್ನಾನ ಮಾಡಿದ ಬಳಿಕ ತಲೆ ಹಾಗೂ ಗಡ್ಡಕ್ಕೆ ಸುಗಂಧವನ್ನು ಹಚ್ಚಬೇಕು. ನಂತರ ಇಹ್ರಾಮ್‌ನ ಉಡುಪುಗಳನ್ನು ಧರಿಸಬೇಕು. ಅದು ಕಡ್ಡಾಯ ನಮಾಝ್ ನಿರ್ವಹಿಸುವ ಸಮಯವಾಗಿದ್ದರೆ, ಕಡ್ಡಾಯ ನಮಾಝ್ ನಿರ್ವಹಿಸಿದ ಬಳಿಕ ಇಹ್ರಾಮ್ ಮಾಡಬೇಕು. ಅಥವಾ ವುದೂವಿನ ಸುನ್ನತ್ ನಮಾಝ್ ನಿರ್ವಹಿಸುತ್ತೇನೆಂದು ನಿಯ್ಯತ್ ಮಾಡಿ, ಐಚ್ಛಿಕ ನಮಾಝ್ ನಿರ್ವಹಿಸಿ ಇಹ್ರಾಮ್ ಮಾಡಬೇಕು. ಯಾಕೆಂದರೆ ಇಹ್ರಾಮ್‌ಗಾಗಿ ಒಂದು ನಿಶ್ಚಿತ ಐಚ್ಛಿಕ ನಮಾಝ್ ಎಂಬುದಿಲ್ಲ. ಯಾಕೆಂದರೆ ಅಂತಹ ಒಂದು ನಮಾಝ್ ಪ್ರವಾದಿ(ﷺ)ರವರು ನಿರ್ವಹಿಸಿದ್ದಾಗಿ ವರದಿ ಯಾಗಿಲ್ಲ. ಋತುಸ್ರಾವವಿರುವವರು ಮತ್ತು ಹೆರಿಗೆ ರಕ್ತವಿರುವವರು ನಮಾಝ್ ಮಾಡಬಾರದು. ನಂತರ ಹಾಜಿ ತಲ್ಬಿಯತ್ ಉಚ್ಛರಿಸಬೇಕು. ಅಂದರೆ ಹೀಗೆ ಹೇಳಬೇಕು:

« لَبَّيْكَ اللَّهُمَّ عُمْرَةً، لَبَّيْكَ اللَّهُـمَّ لَبَّيْـكَ، لَبَّيْـكَ لَا شَرِيـكَ لَـكَ لَبَّيْـكَ، إِنَّ الْحَمْـدَ وَالنِّعْمَةَ لَكَ وَالْمُلْكُ، لَا شَرِيكَ لَكَ »

**"ಲಬ್ಬೈಕಲ್ಲಾಹುಮ್ಮ ಉಮ್ರತನ್, ಲಬ್ಬೈಕಲ್ಲಾಹುಮ್ಮ ಲಬ್ಬೈಕ್, ಲಬ್ಬೈಕ ಲಾ ಶರೀಕ ಲಕ ಲಬ್ಬೈಕ್, ಇನ್ನಲ್ ಹಮ್ದ ವನ್ನಿಅ್‌ಮತ ಲಕ ವಲ್ ಮುಲ್ಕ್, ಲಾ ಶರೀಕ ಲಕ್."**

ಅರ್ಥ: ಓ ಅಲ್ಲಾಹ್, ಉಮ್ರಾ ನಿರ್ವಹಿಸುವುದರೊಂದಿಗೆ ನಾನು ನಿನ್ನ ಕರೆಗೆ ಉತ್ತರಿಸುತ್ತಿದ್ದೇನೆ. ನಾನು ನಿನ್ನ ಕರೆಗೆ ಉತ್ತರಿಸುತ್ತಿದ್ದೇನೆ, ಓ ಅಲ್ಲಾಹ್, ನಾನು ನಿನ್ನ ಕರೆಗೆ ಉತ್ತರಿಸುತ್ತಿದ್ದೇನೆ. ನಾನು ನಿನ್ನ ಕರೆಗೆ ಉತ್ತರಿಸುತ್ತಿದ್ದೇನೆ. ನಿನಗೆ ಯಾವುದೇ ಸಹಭಾಗಿಗಳಿಲ್ಲ. ನಾನು ನಿನ್ನ ಕರೆಗೆ ಉತ್ತರಿಸುತ್ತಿದ್ದೇನೆ. ಖಂಡಿತವಾಗಿಯೂ ಸರ್ವಸ್ತುತಿ, ಅನುಗ್ರಹ ಮತ್ತು ಆಧಿಪತ್ಯವು ನಿನ್ನದಾಗಿದೆ. ನಿನಗೆ ಯಾವುದೇ ಸಹಭಾಗಿಗಳಿಲ್ಲ.

ಮಕ್ಕಾವನ್ನು ತಲುಪುವ ತನಕ ತಲ್ಬಿಯತ್ ಉಚ್ಚರಿಸುತ್ತಲೇ ಇರಬೇಕು.

* ಮಕ್ಕಾಗೆ ಹತ್ತಿರವಾಗುವಾಗ, ಪ್ರವಾದಿ(ﷺ)ರವರು ಮಾಡಿದಂತೆ ಮಕ್ಕಾವನ್ನು ಪ್ರವೇಶಿಸುವುದಕ್ಕಾಗಿ ಸ್ನಾನ ಮಾಡಬೇಕು. ನಂತರ ಬಲಗಾಲನ್ನಿಟ್ಟು ಅಲ್‌ಮಸ್ಜಿದುಲ್ ಹರಾಮನ್ನು ಪ್ರವೇಶಿಸಬೇಕು. ಪ್ರವೇಶಿಸುವಾಗ ಹೀಗೆ ಹೇಳಬೇಕು:

« بِاسْمِ اللَّهِ، وَالصَّلَاةُ وَالسَّلَامُ عَلَى رَسُولِ اللَّهِ، اللَّهُمَّ اغْفِرْ لِي ذُنُوبِي، وَافْتَحْ لِي أَبْـوَابَ رَحْمَتِكَ، أَعُوذُ بِاللَّهِ الْعَظِيمِ، وَبِوَجْهِـهِ الْكَـرِيمِ، وَبِسُـلْطَانِهِ الْقَـدِيمِ مِـنَ الشَّـيْطَانِ الرَّجِيمِ »

**"ಬಿಸ್ಮಿಲ್ಲಾಹಿ, ವಸ್ಸಲಾತು ವಸ್ಸಲಾಮು ಅಲಾ ರಸೂಲಿಲ್ಲಾಹಿ, ಅಲ್ಲಾಹುಮ್ಮಗ್‌ಫಿರ್ ಲೀ ದುನೂಬೀ, ವಫ್ತಹ್ ಲೀ ಅಬ್ವಾಬ ರಹ್ಮತಿಕ, ಅಊದು ಬಿಲ್ಲಾಹಿಲ್**

**ಅಝೀಮಿ, ವಬಿವಜ್‌ಹಿಹಿಲ್ ಕರೀಮಿ, ವಬಿಸುಲ್ತಾನಿಹಿಲ್ ಕದೀಮಿ ಮಿನಶ್ಶೈತಾನಿ ರ್ರಜೀಮ್."**

ಅರ್ಥ: ಅಲ್ಲಾಹನ ನಾಮದೊಂದಿಗೆ (ನಾನು ಪ್ರವೇಶಿಸುತ್ತಿದ್ದೇನೆ). ಅಲ್ಲಾಹನ ರಸೂಲರ ಮೇಲೆ ಸಲಾತ್ ಮತ್ತು ಸಲಾಮ್ ಇರಲಿ. ಓ ಅಲ್ಲಾಹ್, ನನ್ನ ಪಾಪಗಳನ್ನು ನನಗೆ ಕ್ಷಮಿಸು ಮತ್ತು ನಿನ್ನ ಕರುಣೆಯ ಬಾಗಿಲುಗಳನ್ನು ನನಗೆ ತೆರೆದುಕೊಡು. ಮಹೋನ್ನತನಾದ ಅಲ್ಲಾಹನೊಂದಿಗೆ, ಅವನ ಗೌರವಾನ್ವಿತ ಮುಖದೊಂದಿಗೆ, ಅವನ ಶಾಶ್ವತ ಅಧಿಕಾರದೊಂದಿಗೆ, ಬಹಿಷ್ಕೃತನಾದ ಶೈತಾನ ನಿಂದ ನಾನು ರಕ್ಷೆ ಬೇಡುತ್ತಿದ್ದೇನೆ.

* ತವಾಫನ್ನು ಪ್ರಾರಂಭಿಸುವಾಗ ತಲ್ಬಿಯತ್ ಉಚ್ಛರಿಸುವುದನ್ನು ನಿಲ್ಲಿಸಬೇಕು. ಅಂದರೆ ಅಲ್‌ಹಜರುಲ್ ಅಸ್ವದ್‌ನ ಬಳಿಯಿಂದ, ಸಾಧ್ಯವಾದರೆ ಅದನ್ನು ಸ್ಪರ್ಶಿಸಿ ಚುಂಬಿಸುವ ಮೂಲಕ, ಇಲ್ಲದಿದ್ದರೆ ಅದರೆಡೆಗೆ ಕೈಯಿಂದ ಸಂಜ್ಞೆ ಮಾಡುವ ಮೂಲಕ ತವಾಫನ್ನು ಪ್ರಾರಂಭಿಸಬೇಕು. ನಂತರ ಹೀಗೆ ಹೇಳಬೇಕು:

« بِاسْمِ اللَّهِ وَاللَّهُ أَكْبَرُ، اللَّهُمَّ إِيمَانًا بِكَ، وَتَصْدِيقًا بِكِتَابِكَ، وَوَفَاءً بِعَهْدِكَ، وَاتِّبَاعًا لِسُنَّةِ نَبِيِّكَ مُحَمَّدٍ صَلَّى اللَّهُ عَلَيْهِ وَسَلَّمَ »

**"ಬಿಸ್ಮಿಲ್ಲಾಹಿ ವಲ್ಲಾಹು ಅಕ್ಬರ್, ಅಲ್ಲಾಹುಮ್ಮ ಈಮಾನನ್ ಬಿಕ, ವತಸ್ದೀಕನ್ ಬಿಕಿತಾಬಿಕ, ವವಫಾಅನ್ ಬಿಅಹ್ದಿಕ, ವತ್ತಿಬಾಅನ್ ಲಿಸುನ್ನತಿ ನಬಿಯ್ಯಿಕ ಮುಹಮ್ಮದಿನ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್."**

ಅರ್ಥ: ಅಲ್ಲಾಹನ ನಾಮದೊಂದಿಗೆ (ನಾನು ಆರಂಭಿಸುತ್ತೇನೆ) ಮತ್ತು ಅಲ್ಲಾಹು ಮಹಾನನಾಗಿದ್ದಾನೆ. ಓ ಅಲ್ಲಾಹ್, ನಿನ್ನಲ್ಲಿ ವಿಶ್ವಾಸವಿಡುತ್ತಾ, ನಿನ್ನ ಗ್ರಂಥದಲ್ಲಿರುವುದನ್ನು ಸತ್ಯಪಡಿಸುತ್ತಾ, ನಿನ್ನೊಂದಿಗಿರುವ ಕರಾರನ್ನು ನೆರವೇರಿ ಸುತ್ತಾ, ನಿನ್ನ ಪ್ರವಾದಿಯಾದ ಮುಹಮ್ಮದ್(ﷺ)ರವರ ಸುನ್ನತ್ತನ್ನು ಹಿಂಬಾಲಿ ಸುತ್ತಾ (ನಾನಿದನ್ನು ಮಾಡುತ್ತಿದ್ದೇನೆ).

ನಂತರ ಕಅ್‌ಬಾಲಯವನ್ನು ಎಡಭಾಗಕ್ಕೆ ಮಾಡಿಕೊಂಡು ಏಳು ಬಾರಿ ಪ್ರದಕ್ಷಿಣೆ ಮಾಡಬೇಕು. ತವಾಫನ್ನು ಅಲ್‌ಹಜರುಲ್ ಅಸ್ವದ್‌ನಿಂದ ಪ್ರಾರಂಭಿಸಿ ಅಲ್ಲಿಗೇ ಕೊನೆಗೊಳಿಸಬೇಕು. ಅಲ್‌ಹಜರುಲ್ ಅಸ್ವದ್ ಮತ್ತು ಅರ್‍ರುಕ್ನುಲ್ ಯಮಾನೀ (ಯಮಾನೀ ಮೂಲೆ)ಯ ಹೊರತು ಕಅ್‌ಬಾಲಯದ ಇತರ ಯಾವುದೇ ಭಾಗವನ್ನೂ ಸ್ಪರ್ಶಿಸಬಾರದು. ಯಾಕೆಂದರೆ ಪ್ರವಾದಿ(ﷺ)ರವರು ಇವೆರಡರ ಹೊರತು ಬೇರೆ ಯಾವುದೇ ಭಾಗವನ್ನೂ ಸ್ಪರ್ಶಿಸಿಲ್ಲ. ತವಾಫ್ ಮಾಡುವಾಗ ಮೊದಲ ಮೂರು ಪ್ರದಕ್ಷಿಣೆಗಳಲ್ಲಿ ರಮ್ಲ್ ಮಾಡುವುದು ಪುರುಷರಿಗೆ ಸುನ್ನತ್ತಾಗಿದೆ. ರಮ್ಲ್ ಮಾಡುವುದು ಎಂದರೆ ವೇಗವಾಗಿ ನಡೆಯುವುದು ಮತ್ತು ಹತ್ತಿರ ಹತ್ತಿರ ಹೆಜ್ಜೆಯಿಡುವುದಾಗಿದೆ. ಎಲ್ಲ ಪ್ರದಕ್ಷಿಣೆ ಗಳಲ್ಲೂ ಇದ್ತಿಬಾಅ್ ಮಾಡಬೇಕು. ಇದ್ತಿಬಾಅ್ ಮಾಡುವುದು ಎಂದರೆ ಬಲ ಹೆಗಲು ಹೊರಗೆ ಕಾಣುವಂತೆ ಬಟ್ಟೆಯನ್ನು ಬಲ ಹೆಗಲ ಅಡಿಭಾಗದಿಂದ ತಂದು ಎಡ ಹೆಗಲ ಮೇಲೆ ಕಟ್ಟುವುದಾಗಿದೆ. ತವಾಫ್ ಮಾಡುವಾಗ ಅಲ್‌ಹಜರುಲ್ ಅಸ್ವದ್‌ನ ಬಳಿಗೆ ತಲುಪುವಾಗಲೆಲ್ಲ ತಕ್ಬೀರ್ (ಅಲ್ಲಾಹು ಅಕ್ಬರ್) ಹೇಳಬೇಕು ಮತ್ತು ಅಲ್‌ಹಜರುಲ್ ಅಸ್ವದ್ ಮತ್ತು ಅರ್‍ರುಕ್ನುಲ್ ಯಮಾನೀಯ ಮಧ್ಯಭಾಗದಲ್ಲಿ ಹೀಗೆ ಹೇಳಬೇಕು:

« رَبَّنَا آتِنَا فِي الدُّنْيَا حَسَنَةً، وَفِي الْآخِرَةِ حَسَنَةً، وَقِنَا عَذَابَ النَّارِ »

**"ರಬ್ಬನಾ ಆತಿನಾ ಫಿದ್ದುನ್ಯಾ ಹಸನತನ್, ವಫಿಲ್ ಆಖಿರತಿ ಹಸನತನ್ ವಕಿನಾ ಅದಾಬನ್ನಾರ್."**

ಅರ್ಥ: ನಮ್ಮ ರಬ್ಬೇ, ನಮಗೆ ಇಹಲೋಕದಲ್ಲಿ ಒಳಿತನ್ನು ದಯಪಾಲಿಸು ಮತ್ತು ಪರಲೋಕದಲ್ಲೂ ಒಳಿತನ್ನು ದಯಪಾಲಿಸು ಮತ್ತು ನಮ್ಮನ್ನು ನರಕಾಗ್ನಿಯ ಶಿಕ್ಷೆಯಿಂದ ಪಾರುಮಾಡು.

ತವಾಫ್‌ನ ಉಳಿದ ವೇಳೆಗಳಲ್ಲಿ ತನಗೆ ಇಷ್ಟವಾದ ದಿಕ್ರ್ ದುಆಗಳನ್ನು ಹೇಳುತ್ತಿರಬೇಕು.

* ಪ್ರತಿಯೊಂದು ಪ್ರದಕ್ಷಿಣೆಗೂ ಒಂದೊಂದು ಪ್ರತ್ಯೇಕ ದುಆ ಎಂಬುದಿಲ್ಲ. ಹಾಜಿಗಳ ಪೈಕಿ ಹೆಚ್ಚಿನವರ ಕೈಯಲ್ಲಿರುವ ಕಿರುಪುಸ್ತಕಗಳ ಬಗ್ಗೆ ಎಚ್ಚರವಹಿಸು ವುದು ಅತ್ಯಾವಶ್ಯಕವಾಗಿದೆ. ಪ್ರತಿಯೊಂದು ತವಾಫ್‌ಗೆ ಒಂದೊಂದು ಪ್ರತ್ಯೇಕ ದುಆ ಇದೆಯೆಂದು ಈ ಪುಸ್ತಕಗಳಲ್ಲಿವೆ. ಇದು ಬಿದ್‌ಅತ್ ಆಗಿದೆ. ಪ್ರವಾದಿ (ﷺ)ರವರಿಂದ ಇದು ವರದಿಯಾಗಿಲ್ಲ. ಪ್ರವಾದಿ(ﷺ)ರವರು ಹೇಳಿದರು:

« كُلُّ بِدْعَةٍ ضَلَالَةٌ »

**“ಎಲ್ಲ ಬಿದ್‌ಅತ್‌ಗಳೂ ಪಥಭ್ರಷ್ಟತೆಯಾಗಿವೆ.”** [**ಮುಸ್ಲಿಮ್**]

* ತವಾಫ್ ಮಾಡುವವನು ಜನದಟ್ಟಣೆಯ ಸಂದರ್ಭದಲ್ಲಿ ಜನರ ಪೈಕಿ ಕೆಲವರು ಬಿಟ್ಟುಬಿಡುವ ಒಂದು ವಿಷಯದ ಬಗ್ಗೆ ಎಚ್ಚರ ವಹಿಸುವುದು ಅತ್ಯಗತ್ಯವಾಗಿದೆ. ಅದೇನೆಂದರೆ ಅವರು ಹಿಜ್ರ್‌ನ ಒಂದು ದ್ವಾರದಿಂದ ಪ್ರವೇಶಿಸಿ ಇನ್ನೊಂದು ದ್ವಾರದಿಂದ ಹೊರಬರುತ್ತಾರೆ. ಅವರು ಕಅ್‌ಬಾಲಯಕ್ಕೆ ತವಾಫ್ ಮಾಡುವಾಗ ಹಿಜ್ರನ್ನು ಸೇರಿಸಿ ತವಾಫ್ ಮಾಡುವುದಿಲ್ಲ. ಇದು ತಪ್ಪು. ಯಾಕೆಂದರೆ ಹಿಜ್ರ್‌ನ ಬಹುಭಾಗವು ಕಅ್‌ಬಾಲಯಕ್ಕೆ ಸೇರಿದ್ದಾಗಿದೆ. ಆದ್ದರಿಂದ ಯಾರಾದರೂ ಹಿಜ್ರ್‌ನ ಒಂದು ದ್ವಾರದಿಂದ ಪ್ರವೇಶಿಸಿ ಇನ್ನೊಂದು ದ್ವಾರದಿಂದ ಹೊರಬಂದು ಕಅ್‌ಬಾಲಯಕ್ಕೆ ತವಾಫ್ ಮಾಡಿದರೆ ಅವನು ಕಅ್‌ಬಾಲಯಕ್ಕೆ ತವಾಫ್ ಮಾಡಿದಂತಾಗುವುದಿಲ್ಲ. ಅವನ ತವಾಫ್ ಸಿಂಧು ವಾಗುವುದಿಲ್ಲ.

* ತವಾಫ್ ಮಾಡಿದ ನಂತರ ಸಾಧ್ಯವಾದರೆ ಮಕಾಮ್ ಇಬ್ರಾಹೀಮ್‌ನ ಹಿಂದೆ ಎರಡು ರಕ್‌ಅತ್ ನಮಾಝ್ ನಿರ್ವಹಿಸಬೇಕು. ಅದು ಸಾಧ್ಯವಾಗ ದಿದ್ದರೆ ಮಸೀದಿಯ ಯಾವುದೇ ಭಾಗದಲ್ಲೂ ನಮಾಝ್ ನಿರ್ವಹಿಸಬಹುದು. ನಂತರ (ಸಅ್‌ಯ್ ನಿರ್ವಹಿಸುವುದಕ್ಕಾಗಿ) ಸಫಾದೆಡೆಗೆ ಹೊರಡಬೇಕು. ಸಫಾದೆಡೆಗೆ ಹತ್ತಿರವಾಗುವಾಗ ಈ ಆಯತ್ತನ್ನು ಪಾರಾಯಣ ಮಾಡಬೇಕು:

﴿إِنَّ الصَّفَا وَالْمَرْوَةَ مِنْ شَعَائِرِ اللَّهِ فَمَنْ حَجَّ الْبَيْتَ أَوِ اعْتَمَرَ فَلَا جُنَاحَ عَلَيْهِ أَنْ يَطَّوَّفَ بِهِمَا وَمَنْ تَطَوَّعَ خَيْرًا فَإِنَّ اللَّهَ شَاكِرٌ عَلِيمٌ﴾

**"ಸಫಾ ಮತ್ತು ಮರ್ವಾ ಅಲ್ಲಾಹನ ಲಾಂಛನಗಳಲ್ಲಿ ಒಳಗೊಂಡದ್ದಾಗಿದೆ. ಆದ್ದರಿಂದ ಯಾರಾದರೂ ಕಅ್‌ಬಾಲಯಕ್ಕೆ ಹಜ್ಜ್ ಅಥವಾ ಉಮ್ರಾ ನಿರ್ವಹಿಸಿದರೆ, ಅವುಗಳ ಮಧ್ಯೆ ತವಾಫ್ ಮಾಡುವುದರಲ್ಲಿ ಅವನ ಮೇಲೆ ದೋಷವಿಲ್ಲ. ಯಾರಾದರೂ ಸ್ವಯಂಪ್ರೇರಿತರಾಗಿ ಒಳಿತನ್ನು ಮಾಡಿದರೆ ಖಂಡಿತವಾಗಿಯೂ ಅಲ್ಲಾಹು ಕೃತಜ್ಞನೂ ಸರ್ವಜ್ಞನೂ ಆಗಿದ್ದಾನೆ." [ಸೂರಃ ಅಲ್‌ಬಕರಃ 158]**

ಇದರ ನಂತರ ಈ ಆಯತ್ತನ್ನು ಪುನರಾವರ್ತಿಸಬಾರದು. ನಂತರ ಸಫಾದ ಮೇಲೇರಿ, ಕಿಬ್ಲಾದೆಡೆಗೆ ತಿರುಗಿ, ಕೈಗಳನ್ನೆತ್ತಿ ಅಲ್ಲಾಹು ಅಕ್ಬರ್ ಮತ್ತು ಅಲ್‌ಹಮ್ದುಲಿಲ್ಲಾಹ್ ಹೇಳಬೇಕು. ನಂತರ ಹೀಗೆ ಹೇಳಬೇಕು:

« لَا إِلَهَ إِلَّا اللَّهُ وَحْدَهُ لَا شَرِيكَ لَهُ، لَهُ الْمُلْكُ وَلَهُ الْحَمْدُ، وَهُوَ عَلَى كُلِّ شَيْءٍ قَدِيرٌ، لَا إِلَهَ إِلَّا اللَّهُ وَحْدَهُ، أَنْجَزَ وَعْدَهُ، وَنَصَرَ عَبْدَهُ، وَهَزَمَ الْأَحْزَابَ وَحْدَهُ »

**"ಲಾ ಇಲಾಹ ಇಲ್ಲಲ್ಲಾಹು ವಹ್ದಹು ಲಾ ಶರೀಕ ಲಹು, ಲಹುಲ್ ಮುಲ್ಕು ವಲಹುಲ್ ಹಮ್ದು, ವಹುವ ಅಲಾ ಕುಲ್ಲಿ ಶೈಇನ್ ಕದೀರ್, ಲಾ ಇಲಾಹ ಇಲ್ಲಲ್ಲಾಹು ವಹ್ದಹು, ಅನ್ಜಝ ವಅ್‌ದಹು, ವನಸರ ಅಬ್ದಹು, ವಹಝಮಲ್ ಅಹ್‌ಝಾಬ ವಹ್ದಹು."**

ಅರ್ಥ: ಅಲ್ಲಾಹನ ಹೊರತು ಅನ್ಯ ಸತ್ಯ ಆರಾಧ್ಯರಿಲ್ಲ, ಅವನು ಏಕೈಕನಾಗಿದ್ದಾನೆ. ಅವನಿಗೆ ಯಾವುದೇ ಸಹಭಾಗಿಗಳಿಲ್ಲ. ಆಧಿಪತ್ಯವು ಅವನದ್ದಾಗಿದೆ ಮತ್ತು ಸರ್ವಸ್ತುತಿ ಅವನಿಗಾಗಿದೆ. ಅವನು ಎಲ್ಲ ವಿಷಯಗಳಲ್ಲೂ ಸಾಮರ್ಥ್ಯವುಳ್ಳವನಾಗಿದ್ದಾನೆ. ಅಲ್ಲಾಹನ ಹೊರತು ಅನ್ಯ ಸತ್ಯ ಆರಾಧ್ಯರಿಲ್ಲ. ಅವನು ಏಕೈಕನಾಗಿದ್ದಾನೆ. ಅವನು ತನ್ನ ವಾಗ್ದಾನವನ್ನು ಪಾಲಿಸಿದ್ದಾನೆ. ತನ್ನ ದಾಸನಿಗೆ ಸಹಾಯ ಮಾಡಿದ್ದಾನೆ ಮತ್ತು ಶತ್ರುಗಳನ್ನು ಅವನೊಬ್ಬನೇ ಸೋಲಿಸಿದ್ದಾನೆ.

ನಂತರ ಯಾವುದಾದರೂ ಪ್ರಾರ್ಥನೆಯನ್ನು ಪ್ರಾರ್ಥಿಸಬೇಕು. ನಂತರ (ಮೇಲಿನ) ದಿಕ್ರನ್ನು ಎರಡನೆ ಬಾರಿ ಹೇಳಬೇಕು. ನಂತರ ಯಾವುದಾದರೂ ಪ್ರಾರ್ಥನೆಯನ್ನು ಪ್ರಾರ್ಥಿಸಬೇಕು. ನಂತರ (ಮೇಲಿನ) ದಿಕ್ರನ್ನು ಮೂರನೆ ಬಾರಿ ಹೇಳಬೇಕು.

* ನಂತರ ಸಫಾದಿಂದ ಇಳಿದು ಮರ್ವಾದೆಡೆಗೆ ಹೋಗಬೇಕು. ಹಸಿರು ಚಿಹ್ನೆಯ ತನಕ, ಅಂದರೆ ಹಸಿರು ಕಂಬದ ತನಕ ನಡೆಯುತ್ತಾ ಹೋಗಬೇಕು ಮತ್ತು ಆ ಹಸಿರು ಕಂಬದಿಂದ ಇನ್ನೊಂದು ಹಸಿರು ಕಂಬದ ತನಕ ವೇಗವಾಗಿ ಓಡಬೇಕು. (ಇದು ಪುರುಷರಿಗೆ ಮಾತ್ರ). ಇದು ಇತರರಿಂದ ತೊಂದರೆಯನ್ನು ಅನುಭವಿಸದೆ ಮತ್ತು ಇತರರಿಗೆ ತೊಂದರೆ ಕೊಡದೆ ಓಡಲು ಸಾಧ್ಯವಾಗು ವುದಾದರೆ ಮಾತ್ರ. ನಂತರ ಎರಡನೆ ಹಸಿರು ಕಂಬದಿಂದ ಮರ್ವಾದ ತನಕ ಎಂದಿನಂತೆ ನಡೆಯುತ್ತಾ ಹೋಗಬೇಕು. ಮರ್ವಾವನ್ನು ತಲುಪಿದರೆ ಅದರ ಮೇಲೇರಿ, ಕಿಬ್ಲಾದೆಡೆಗೆ ತಿರುಗಿ, ಕೈಗಳನ್ನೆತ್ತಿ ಸಫಾದಲ್ಲಿ ಹೇಳಿದ್ದನ್ನೇ ಹೇಳಬೇಕು. ಇದು ಒಂದು ಪ್ರದಕ್ಷಿಣೆಯಾಗಿದೆ.

* ನಂತರ ಮರ್ವಾದಿಂದ ಪುನಃ ಸಫಾದೆಡೆಗೆ ಮರಳಬೇಕು. ಇದು ಎರಡನೆ ಪ್ರದಕ್ಷಿಣೆಯಾಗಿದೆ. ಮೊದಲನೆ ಪ್ರದಕ್ಷಿಣೆಯಲ್ಲಿ ಹೇಳಿದಂತೆಯೇ ಮತ್ತು ಮಾಡಿ ದಂತೆಯೇ ಈ ಪ್ರದಕ್ಷಿಣೆಯಲ್ಲೂ ಹೇಳಬೇಕು ಮತ್ತು ಮಾಡಬೇಕು. ಸಫಾದಿಂದ ಮರ್ವಾಗೆ ಒಂದು ಪ್ರದಕ್ಷಿಣೆ ಮತ್ತು ಮರ್ವಾದಿಂದ ಸಫಾಗೆ ಇನ್ನೊಂದು ಪ್ರದಕ್ಷಿಣೆಯಾಗಿದೆ. ಹೀಗೆ ಏಳು ಪ್ರದಕ್ಷಿಣೆಗಳನ್ನು ಪೂರ್ಣಗೊಳಿಸಿ ದರೆ ತಲೆಗೂದಲನ್ನು ಕತ್ತರಿಸಿ ಗಿಡ್ಡಗೊಳಿಸಬೇಕು. ತಲೆಗೂದಲನ್ನು ಸಂಪೂರ್ಣವಾಗಿ ಕತ್ತರಿಸಿ ಗಿಡ್ಡಗೊಳಿಸಬೇಕು. ಅದು ತಲೆಯಲ್ಲಿ ಸ್ಪಷ್ಟವಾಗಿ ಕಾಣುವಂತಿರಬೇಕು. ಮಹಿಳೆಯು ತನ್ನ ತಲೆಗೂದಲುಗಳೆಲ್ಲದರ ತುದಿಯನ್ನು ಬೆರಳಿನ ಗಾತ್ರದಷ್ಟು ಕತ್ತರಿಸಬೇಕು. ನಂತರ ಇಹ್ರಾಮ್‌ನಿಂದ ಸಂಪೂರ್ಣವಾಗಿ ವಿಮುಕ್ತನಾಗಬೇಕು. ಇದರ ಬಳಿಕ ಅಲ್ಲಾಹು ಧರ್ಮಸಮ್ಮತಗೊಳಿಸಿದ ಪತ್ನಿಯರು, ಸುಗಂಧ, ಉಡುಪು ಮೊದಲಾದವುಗಳ ಮೂಲಕ ಸುಖವನ್ನು ಪಡೆಯಬಹುದಾಗಿದೆ.

*  ದುಲ್‌ಹಿಜ್ಜಃ ಎಂಟನೆ ದಿನದಂದು ಹಜ್ಜ್‌ಗಾಗಿ ಇಹ್ರಾಮ್ ಮಾಡಿ, ಸ್ನಾನ ಮಾಡಿ, ಸುಗಂಧವನ್ನು ಹಚ್ಚಿ, ಇಹ್ರಾಮ್‌ನ ಉಡುಪನ್ನು ಧರಿಸಿ, ಮಿನಾದೆಡೆಗೆ ಹೊರಡಬೇಕು. ಮಿನಾದಲ್ಲಿ ಝುಹ್ರ್, ಅಸ್ರ್, ಮಗ್ರಿಬ್, ಇಶಾ ಮತ್ತು ಫಜ್ರ್ ನಮಾಝ್‌ಗಳನ್ನು ನಿರ್ವಹಿಸಬೇಕು. ನಾಲ್ಕು ರಕ್‌ಅತ್‌ಗಳ ನಮಾಝ್‌ಗಳನ್ನು ಎರಡು ರಕ್‌ಅತ್‌ಗಳಾಗಿ ನಿರ್ವಹಿಸಬೇಕು. ಪ್ರತಿಯೊಂದು ನಮಾಝನ್ನೂ ಅದರ ಸಮಯದಲ್ಲೇ ನಿರ್ವಹಿಸಬೇಕು. ಮಿನಾದಲ್ಲಿ ನಮಾಝ್‌ಗಳನ್ನು ಜಮ್‌ಅ್ ಮಾಡಬಾರದು. ಇಲ್ಲಿ ನಮಾಝ್‌ಗಳನ್ನು ಕಸ್ರ್ ಮಾತ್ರ ಮಾಡಬೇಕಾಗಿದೆ.

*  ದುಲ್‌ಹಿಜ್ಜಃ ಒಂಬತ್ತನೆ ದಿನದಂದು, ಅಂದರೆ ಅರಫಾ ದಿನದಂದು, ಸೂರ್ಯೋದಯದ ಬಳಿಕ ಅರಫಾದೆಡೆಗೆ ತೆರಳಬೇಕು. ಸಾಧ್ಯವಾದರೆ ನಮಿರಃದಲ್ಲಿ ಇಳಿಯಬೇಕು. ಸಾಧ್ಯವಾಗದಿದ್ದರೆ ನೇರವಾಗಿ ಅರಫದೆಡೆಗೆ ತೆರಳಿ ಅಲ್ಲಿ ತಂಗಬೇಕು. ಮಧ್ಯಾಹ್ನವಾಗುವಾಗ ಝುಹ್ರ್ ಮತ್ತು ಅಸ್ರ್ ನಮಾಝ್ ಗಳನ್ನು ಕಸ್ರ್ ಮತ್ತು ಜಮ್‌ಅ್ ತಕ್ದೀಮ್ (ಅಂದರೆ ಝುಹ್ರ್ ಮತ್ತು ಅಸ್ರ್ ನಮಾಝ್‌ಗಳನ್ನು ಝುಹ್ರ್‌ನ ಸಮಯದಲ್ಲಿ ನಿರ್ವಹಿಸುವುದು) ಆಗಿ ನಿರ್ವಹಿಸಬೇಕು. ಇದರ ಬಳಿಕ ಅಲ್ಲಾಹನೆಡೆಗೆ ಹತ್ತಿರಗೊಳಿಸುವಂತಹ ದಿಕ್ರ್, ದುಆ, ಕುರ್‌ಆನ್ ಪಾರಾಯಣ ಮೊದಲಾದವುಗಳಲ್ಲಿ ಮಗ್ನರಾಗಬೇಕು. ಆ ದಿನದ ಕೊನೆಯ ಭಾಗದಲ್ಲಿ ಅಲ್ಲಾಹನೊಂದಿಗೆ ಪ್ರಾರ್ಥಿಸುವುದಕ್ಕೆ ಹೆಚ್ಚು ಒತ್ತು ಕೊಡಬೇಕು. ಯಾಕೆಂದರೆ ಅದು ಉತ್ತರ ಸಿಗುವುದಕ್ಕೆ ಹೆಚ್ಚು ಅರ್ಹವಾಗಿದೆ.

*  ದುಆ ಮಾಡುವಾಗ ಕಿಬ್ಲದೆಡೆಗೆ ತಿರುಗುವುದು ಮತ್ತು ಕೈಗಳನ್ನೆತ್ತುವುದು ಸುನ್ನತ್ತಾಗಿದೆ. ಈ ಮಹತ್ವಪೂರ್ಣ ಸ್ಥಳದಲ್ಲಿ ಪ್ರವಾದಿ(ﷺ)ರವರು ಹೆಚ್ಚಾಗಿ ಪ್ರಾರ್ಥಿಸುತ್ತಿದ್ದುದು ಈ ಪ್ರಾರ್ಥನೆಯಾಗಿತ್ತು:

« لَا إِلَهَ إِلَّا اللَّهُ وَحْدَهُ لَا شَرِيكَ لَهُ، لَهُ الْمُلْكُ وَلَهُ الْحَمْدُ، وَهُوَ عَلَى كُلِّ شَيْءٍ قَدِيرٌ »

**"ಲಾ ಇಲಾಹ ಇಲ್ಲಲ್ಲಾಹು ವಹ್ದಹು ಲಾ ಶರೀಕ ಲಹು, ಲಹುಲ್ ಮುಲ್ಕು ವಲಹುಲ್ ಹಮ್ದು, ವಹುವ ಅಲಾ ಕುಲ್ಲಿ ಶೈಇನ್ ಕದೀರ್."**

ಅರ್ಥ: ಅಲ್ಲಾಹನ ಹೊರತು ಅನ್ಯ ಸತ್ಯ ಆರಾಧ್ಯರಿಲ್ಲ, ಅವನು ಏಕೈಕನಾಗಿದ್ದಾನೆ. ಅವನಿಗೆ ಯಾವುದೇ ಸಹಭಾಗಿಗಳಿಲ್ಲ. ಆಧಿಪತ್ಯವು ಅವನದ್ದಾಗಿದೆ ಮತ್ತು ಸರ್ವಸ್ತುತಿ ಅವನಿಗಾಗಿದೆ. ಅವನು ಎಲ್ಲ ವಿಷಯಗಳಲ್ಲೂ ಸಾಮರ್ಥ್ಯವುಳ್ಳವನಾಗಿದ್ದಾನೆ.

ಅದೇ ರೀತಿ ಪ್ರವಾದಿ(ﷺ)ರವರು ಪ್ರಾರ್ಥಿಸಿದ ದುಆ ಮತ್ತು ದಿಕ್ರ್‌ಗಳನ್ನು ಪ್ರಾರ್ಥಿಸುವುದಕ್ಕೆ ಹೆಚ್ಚು ಒತ್ತುಕೊಡಬೇಕು. ಯಾಕೆಂದರೆ ಪ್ರವಾದಿ(ﷺ)ರವರು ಪ್ರಾರ್ಥಿಸಿದ ದುಆ ಮತ್ತು ದಿಕ್ರ್‌ಗಳು ಸಮಗ್ರವೂ ಪ್ರಯೋಜನಕರವೂ ಆಗಿದೆ.

ಉದಾಹರಣೆಗೆ:

« اللَّهُمَّ لَكَ الْحَمْدُ كَالَّذِي نَقُولُ، وَخَيْرًا مِمَّا نَقُولُ، اللَّهُمَّ لَكَ صَلَاتِي وَنُسُكِي وَمَحْيَايَ وَمَمَاتِي، وَإِلَيْكَ رَبِّي مَآبِي، وَلَكَ رَبِّي تُرَاثِي »

**“ಅಲ್ಲಾಹುಮ್ಮ ಲಕಲ್ ಹಮ್ದು ಕಲ್ಲದೀ ನಕೂಲು, ವಖೈರನ್ ಮಿಮ್ಮಾ ನಕೂಲು, ಅಲ್ಲಾಹುಮ್ಮ ಲಕ ಸಲಾತೀ ವನುಸುಕೀ ವಮಹ್ಯಾಯ ವಮಮಾತೀ, ವಇಲೈಕ ರಬ್ಬೀ ಮಆಬೀ, ವಲಕ ರಬ್ಬೀ ತುರಾಸೀ.”**

ಅರ್ಥ: ಓ ಅಲ್ಲಾಹ್, ನಾವು ಹೇಳುತ್ತಿರುವಂತಹ ಮತ್ತು ನಾವು ಹೇಳುತ್ತಿರುವುದಕ್ಕಿಂತಲೂ ಉತ್ತಮವಾದ ಸ್ತುತಿಯು ನಿನಗಾಗಿದೆ. ಓ ಅಲ್ಲಾಹ್, ನನ್ನ ನಮಾಝ್, ನನ್ನ ಬಲಿಕರ್ಮ, ನನ್ನ ಜೀವನ ಮತ್ತು ನನ್ನ ಮರಣ ನಿನಗಾಗಿದೆ. ಓ ನನ್ನ ರಬ್ಬೇ, ನನ್ನ ಮರಳುವಿಕೆಯು ನಿನ್ನೆಡೆಗಾಗಿದೆ. ಓ ನನ್ನ ರಬ್ಬೇ ನನ್ನ ಉತ್ತರಾಧಿಕಾರವು ನಿನಗಾಗಿದೆ.

« اللَّهُمَّ إِنِّي أَعُوذُ بِكَ مِنْ عَذَابِ الْقَبْرِ، وَوَسْوَسَةِ الصَّدْرِ، وَشَتَّاتِ الْأَمْرِ، اللَّهُمَّ إِنِّي أَعُوذُ بِكَ مِنْ شَرِّ مَا تَجِيءُ بِهِ الرِّيحُ »

**“ಅಲ್ಲಾಹುಮ್ಮ ಇನ್ನೀ ಅಊದು ಬಿಕ ಮಿನ್ ಅದಾಬಿಲ್ ಕಬ್ರಿ, ವವಸ್ವಸತಿ ಸ್ಸದ್ರಿ, ವಶತ್ತಾತಿಲ್ ಅಮ್ರಿ, ಅಲ್ಲಾಹುಮ್ಮ ಇನ್ನೀ ಅಊದು ಬಿಕ ಮಿನ್ ಶರ್ರಿ ಮಾ ತಜೀಉ ಬಿಹಿ ರ್‍ರೀಹು.”**

ಅರ್ಥ: ಓ ಅಲ್ಲಾಹ್, ನಾನು ನಿನ್ನೊಂದಿಗೆ ಗೋರಿಯ ಶಿಕ್ಷೆಯಿಂದ, ಹೃದಯದ ವಸ್ವಾಸಿನಿಂದ ಮತ್ತು ಕಾರ್ಯಗಳ ಭಿನ್ನತೆಯಿಂದ ರಕ್ಷೆ ಬೇಡುತ್ತಿದ್ದೇನೆ. ಓ ಅಲ್ಲಾಹ್, ನಾನು ನಿನ್ನೊಂದಿಗೆ ಗಾಳಿಯು ತರುವ ಕೆಡುಕಿನಿಂದ ರಕ್ಷೆ ಬೇಡುತ್ತಿದ್ದೇನೆ.

« اللَّهُمَّ اجْعَلْ فِي قَلْبِي نُورًا، وَفِي سَمْعِي نُـورًا، وَفِي بَصَرِي نُـورًا، اللَّهُـمَّ إِنَّـكَ تَسْـمَعُ كَلَامِي، وَتَرَى مَكَانِي، وَتَعْلَمُ سِرِّي وَعَلَانِيَتِي، لَا يَخْفَى عَلَيْكَ شَيْءٌ مِـنْ أَمْـرِي، أَنَـا الْبَائِسُ الْفَقِيرُ، الْمُسْتَغِيثُ الْمُسْتَجِيرُ، الْوَجِلُ الْمُشْـفِقُ الْمُقِـرُّ، الْمُعْـتَرِفُ بِـذُنُوبِي، أَسْأَلُكَ مَسْأَلَةَ الْمِسْكِينِ، وَأَبْتَهِلُ إِلَيْكَ ابْتِهَالَ الْمُذْنِبِ الذَّلِيـلِ، وَأَدْعُـوكَ دُعَاءَ مَـنْ خَضَعَتْ لَكَ رَقَبَتُهُ، وَفَاضَتْ لَكَ عَيْنَاهُ، وَذَلَّ لَكَ جَسَدُهُ، وَرَغِـمَ لَـكَ أَنْفُـهُ، اللَّهُـمَّ رَبَّنَا آتِنَا فِي الدُّنْيَا حَسَنَةً وَفِي الْآخِرَةِ حَسَنَةً، وَقِنَا عَذَابَ النَّـارِ، اللَّهُـمَّ إِنِّي ظَلَمْـتُ نَفْسِي فَاغْفِرْ لِي إِنَّكَ أَنْتَ الْغَفُورُ الرَّحِيمُ »

**“ಅಲ್ಲಾಹುಮ್ಮ ಜ್‌ಅಲ್ ಫೀ ಕಲ್ಬೀ ನೂರನ್, ವಫೀ ಸಮ್‌ಈ ನೂರನ್, ವಫೀ ಬಸರೀ ನೂರನ್, ಅಲ್ಲಾಹುಮ್ಮ ಇನ್ನಕ ತಸ್ಮಉ ಕಲಾಮೀ, ವತರಾ ಮಕಾನೀ, ವತಅ್‌ಲಮು ಸಿರ್‍ರೀ ವಅಲಾನಿಯತೀ, ಲಾ ಯಖ್‌ಫಾ ಅಲೈಕ ಶೈಉನ್ ಮಿನ್ ಅಮ್ರೀ, ಅನಲ್ ಬಾಇಸುಲ್ ಫಕೀರುಲ್ ಮುಸ್ತಗೀಸುಲ್ ಮುಸ್ತಜೀರುಲ್ ವಜಿಲುಲ್ ಮುಶ್‌ಫಿಕುಲ್ ಮುಕಿರ್‍ರುಲ್ ಮುಅ್‌ತರಿಫು ಬಿದುನೂಬೀ, ಅಸ್‌ಅಲುಕ ಮಸ್‌ಅಲತಲ್ ಮಿಸ್ಕೀನಿ, ವಅಬ್ತಹಿಲು ಇಲೈಕ ಬ್ತಿಹಾಲಲ್ ಮುದ್ನಿಬಿ ದ್ದಲೀಲಿ, ವಅದ್‌ಊಕ ದುಆಅ ಮನ್ ಖದಅತ್ ಲಕ ರಕಬತುಹು, ವಫಾದತ್ ಲಕ ಐನಾಹು, ವದಲ್ಲ ಲಕ ಜಸದುಹು, ವರಗಿಮ ಲಕ ಅನ್‌ಫುಹು,**

**ಅಲ್ಲಾಹುಮ್ಮ ರಬ್ಬನಾ ಆತಿನಾ ಫಿದ್ದುನ್ಯಾ ಹಸನತನ್, ವಫಿಲ್ ಆಖಿರತಿ ಹಸನತನ್, ವಕಿನಾ ಅದಾಬನ್ನಾರ್, ಅಲ್ಲಾಹುಮ್ಮ ಇನ್ನೀ ಝಲಮ್ತು ನಫ್ಸೀ ಫಗ್‌ಫಿರ್ ಲೀ ಇನ್ನಕ ಅನ್ತಲ್ ಗಫೂರು ರ್ರಹೀಮ್."**

ಅರ್ಥ: ಓ ಅಲ್ಲಾಹ್, ನನ್ನ ಹೃದಯದಲ್ಲಿ ಬೆಳಕನ್ನಿಡು, ನನ್ನ ಶ್ರವಣದಲ್ಲಿ ಬೆಳಕನ್ನಿಡು ಮತ್ತು ನನ್ನ ದೃಷ್ಟಿಯಲ್ಲಿ ಬೆಳಕನ್ನಿಡು. ಓ ಅಲ್ಲಾಹ್, ನೀನು ನನ್ನ ಮಾತನ್ನು ಕೇಳುತ್ತಿರುವೆ, ನನ್ನ ಸ್ಥಾನವನ್ನು ಕಾಣುತ್ತಿರುವೆ, ನನ್ನ ಗುಟ್ಟು ಮತ್ತು ಬಹಿರಂಗವನ್ನು ಅರಿಯುತ್ತಿರುವೆ, ನನ್ನ ಕಾರ್ಯಗಳಲ್ಲಿ ಯಾವುದೂ ನಿನ್ನಿಂದ ಮರೆಯಾಗಿಲ್ಲ. ನಾನು ಅಗತ್ಯವುಳ್ಳವನೂ, ಬಡವನೂ, ಸಹಾಯ ಬೇಡು ವವನೂ, ಆಶ್ರಯ ಬೇಡುವವನೂ, ಭಯವಿಹ್ವಲನೂ, ನನ್ನ ಪಾಪಗಳನ್ನು ಒಪ್ಪಿಕೊಳ್ಳುವವನೂ ಆಗಿರುವೆ. ಬಡವನು ಪ್ರಾರ್ಥಿಸುವ ಪ್ರಾರ್ಥನೆಯನ್ನು ನಾನು ನಿನ್ನೊಂದಿಗೆ ಪ್ರಾರ್ಥಿಸುತ್ತಿರುವೆ. ಪಾಪಿ ಮತ್ತು ನಿಂದ್ಯನು ಪ್ರಾರ್ಥಿಸು ವಂತೆ ನಾನು ನಿನ್ನೊಂದಿಗೆ ಪ್ರಾರ್ಥಿಸುತ್ತಿರುವೆ. ಯಾರ ಕೊರಳು ನಿನಗೆ ಶರಣಾಗಿದೆಯೋ, ಯಾರ ಕಣ್ಣುಗಳಲ್ಲಿ ನಿನಗೋಸ್ಕರ ಕಣ್ಣೀರು ಹರಿಯು ತ್ತಿದೆಯೋ, ಯಾರ ದೇಹವು ನಿನಗೆ ವಿನಮ್ರವಾಗಿದೆಯೋ, ಅಂತಹವನು ಪ್ರಾರ್ಥಿಸುವ ಪ್ರಾರ್ಥನೆಯನ್ನು ನಾನು ನಿನ್ನೊಂದಿಗೆ ಪ್ರಾರ್ಥಿಸುತ್ತಿರುವೆ. ಓ ಅಲ್ಲಾಹ್, ನಮ್ಮ ರಬ್ಬೇ, ನಮಗೆ ಇಹಲೋಕದಲ್ಲಿ ಒಳಿತನ್ನು ದಯಪಾಲಿಸು ಮತ್ತು ಪರಲೋಕದಲ್ಲೂ ಒಳಿತನ್ನು ದಯಪಾಲಿಸು ಮತ್ತು ನಮ್ಮನ್ನು ನರಕಾಗ್ನಿಯ ಶಿಕ್ಷೆಯಿಂದ ಪಾರು ಮಾಡು. ಓ ಅಲ್ಲಾಹ್, ನಾನು ನನ್ನ ಶರೀರದೊಂದಿಗೆ ಅನ್ಯಾಯವೆಸಗಿದ್ದೇನೆ. ಆದ್ದರಿಂದ ನನಗೆ ಕ್ಷಮೆ ನೀಡು. ಖಂಡಿತವಾಗಿಯೂ ನೀನು ಅತ್ಯಧಿಕ ಕ್ಷಮಿಸುವವನೂ ಕರುಣೆಯುಳ್ಳವನೂ ಆಗಿರುವೆ.

* ಅರಫಾ ದಿನದಂದು ಸೂರ್ಯಾಸ್ತವಾದರೆ ಮುಝ್ದಲಿಫಾದೆಡೆಗೆ ತೆರಳಬೇಕು. ಅಲ್ಲಿ ಮಗ್ರಿಬ್ ಮತ್ತು ಇಶಾ ನಮಾಝ್‌ಗಳನ್ನು ಜಮ್ಅ್ ಮತ್ತು ಕಸ್ರ್ ಆಗಿ ನಿರ್ವಹಿಸಬೇಕು. ನಂತರ ಫಜ್ರ್ ನಮಾಝ್ ನಿರ್ವಹಿಸುವ ತನಕ ಅಲ್ಲೇ ತಂಗಬೇಕು. ನಂತರ ಪ್ರಭಾತವು ಬೆಳಗುವ ತನಕ ಅಲ್ಲಾಹು ಅಝ್ಝ

ವಜಲ್ಲ್ ನೊಂದಿಗೆ ಪ್ರಾರ್ಥಿಸುತ್ತಿರಬೇಕು. ನಂತರ ಮಿನಾದೆಡೆಗೆ ತೆರಳಬೇಕು. ಜನದಟ್ಟಣೆಯಿಂದಾಗಿ ಕಷ್ಟವನ್ನು ಅನುಭವಿಸುವ ವ್ಯಕ್ತಿಗೆ ಪ್ರಭಾತಕ್ಕೆ ಮುಂಚೆಯೇ ಮುಝ್ದಲಿಫದಿಂದ ತೆರಳಬಹುದಾಗಿದೆ. ಯಾಕೆಂದರೆ ಇಂತಹವರಿಗೆ ಪ್ರವಾದಿ (ﷺ)ರವರು ರಿಯಾಯಿತಿ ನೀಡಿದ್ದಾರೆ.

* ಮಿನಾವನ್ನು ತಲುಪಿದ ತಕ್ಷಣ ಮೊಟ್ಟಮೊದಲು ಜಮ್ರತುಲ್ ಅಕಬಃಕ್ಕೆ ಏಳು ಹರಳುಗಲ್ಲುಗಳನ್ನು ಎಸೆಯಲು ಧಾವಿಸಬೇಕು. ಪ್ರತಿಯೊಂದು ಎಸೆತದೊಂದಿಗೆ ತಕ್ಬೀರ್ (ಅಲ್ಲಾಹು ಅಕ್ಬರ್) ಹೇಳಬೇಕು. ನಂತರ ಬಲಿಮೃಗವನ್ನು ಬಲಿ ನೀಡಬೇಕು. ನಂತರ ತಲೆಗೂದಲನ್ನು ಬೋಳಿಸಬೇಕು. ಕೂದಲನ್ನು ಗಿಡ್ಡಗೊಳಿಸುವುದಕ್ಕಿಂತಲೂ ಬೋಳಿಸುವುದು ಶ್ರೇಷ್ಠವಾಗಿದೆ. ಆದರೆ ಗಿಡ್ಡಗೊಳಿಸುವುದರಲ್ಲಿ ದೋಷವಿಲ್ಲ. ಮಹಿಳೆಯು ತನ್ನ ಕೂದಲ ತುದಿಯನ್ನು ಒಂದು ಬೆರಳಿನಷ್ಟು ಕತ್ತರಿಸಬೇಕು. ಇಲ್ಲಿಗೆ ಇಹ್ರಾಮ್‌ನಿಂದ ಮೊದಲ ತಹಲ್ಲುಲ್ (ವಿಮುಕ್ತಿ) ಸಿಗುತ್ತದೆ. ಇದರೊಂದಿಗೆ ಪತ್ನಿಯನ್ನು ಸಮೀಪಿಸುವುದರ ಹೊರತು ಇಹ್ರಾಮ್‌ನಲ್ಲಿರುವ ಇತರೆಲ್ಲ ನಿಷಿದ್ಧಗಳೂ ಧರ್ಮಸಮ್ಮತವಾಗುತ್ತವೆ.

* ನಂತರ ಸುಗಂಧವನ್ನು ಹಚ್ಚಿ, ಸಾಧಾರಣ ಉಡುಪನ್ನು ತೊಟ್ಟು ಮಕ್ಕಾದೆಡೆಗೆ ತೆರಳಬೇಕು. ಅಲ್ಲಿ ಏಳು ಬಾರಿ ಪ್ರದಕ್ಷಿಣೆ ಮಾಡಬೇಕು. ಇದನ್ನು ತವಾಫುಲ್ ಇಫಾದಃ ಎನ್ನಲಾಗುತ್ತದೆ. ನಂತರ ಏಳು ಬಾರಿ ಸಅ್‌ಯ್ ನಿರ್ವಹಿಸಬೇಕು. ಈ ತವಾಫ್ ಮತ್ತು ಸಅ್‌ಯ್ ಹಜ್ಜ್‌ಗಿರುವುದಾಗಿದೆ. ಇದಕ್ಕಿಂತ ಮೊದಲು ನಿರ್ವಹಿಸಿದ ತವಾಫ್ ಮತ್ತು ಸಅ್‌ಯ್ ಉಮ್ರಕ್ಕಿರುವುದಾಗಿದೆ. ಇದರೊಂದಿಗೆ ಪತ್ನಿಯನ್ನು ಸಮೀಪಿಸುವುದು ಸೇರಿದಂತೆ ಇಹ್ರಾಮ್‌ನ ಎಲ್ಲ ನಿಷಿದ್ಧಗಳೂ ಧರ್ಮಸಮ್ಮತವಾಗುತ್ತವೆ.

* ಒಟ್ಟಿನಲ್ಲಿ ಈದ್ ದಿನದಂದು (ದುಲ್‌ಹಿಜ್ಜ ಹತ್ತನೆ ದಿನದಂದು) ಹಾಜಿ ಮಾಡಬೇಕಾದುದೇನೆಂದರೆ:

1. ಜಮ್ರತುಲ್ ಅಕಬಃಕ್ಕೆ ಕಲ್ಲೆಸೆಯುವುದು.

2. ಬಲಿಮೃಗವನ್ನು ಬಲಿ ನೀಡುವುದು.

3. ತಲೆಗೂದಲನ್ನು ಬೋಳಿಸುವುದು ಅಥವಾ ಗಿಡ್ಡಗೊಳಿಸುವುದು.

4. ತವಾಫ್ ಮಾಡುವುದು.

5. ಸಅ್‌ಯ್ ಮಾಡುವುದು.

ಈ ಐದು ವಿಷಯಗಳನ್ನು ಒಂದರ ನಂತರ ಒಂದರಂತೆ ಕ್ರಮಪ್ರಕಾರ ನಿರ್ವಹಿಸಬೇಕು. ಇನ್ನು ಯಾರಾದರೂ ಕ್ರಮಪ್ರಕಾರ ನಿರ್ವಹಿಸದಿದ್ದರೆ ಅದರಲ್ಲಿ ದೋಷವಿಲ್ಲ. ಯಾಕೆಂದರೆ ಇವುಗಳ ಪೈಕಿ ಕೆಲವನ್ನು ಮುಂಚೆ ಮತ್ತು ಕೆಲವನ್ನು ನಂತರ ನಿರ್ವಹಿಸುವುದರ ಬಗ್ಗೆ ಈದ್ ದಿನದಂದು ಪ್ರವಾದಿ (ﷺ)ರವರೊಂದಿಗೆ ಕೇಳಲಾದಾಗಲೆಲ್ಲ ಅವರು:

« افْعَلْ وَلَا حَرَجَ »

**"ಹಾಗೆ ಮಾಡುವುದರಲ್ಲಿ ಏನೂ ದೋಷವಿಲ್ಲ." [ಅಲ್‌ಬುಖಾರೀ ಮತ್ತು ಮುಸ್ಲಿಮ್]** ಎನ್ನುತ್ತಿದ್ದರು.

ಆದ್ದರಿಂದ ಮುಝ್ದಲಿಫಃದಿಂದ ಮಕ್ಕಾದೆಡೆಗೆ ತೆರಳಿ ತವಾಫ್ ಮತ್ತು ಸಅ್‌ಯ್ ನಿರ್ವಹಿಸಿದ ಬಳಿಕ ಮಿನಾದೆಡೆಗೆ ಮರಳಿ ಕಲ್ಲೆಸೆದರೆ ಅದರಲ್ಲಿ ದೋಷವಿಲ್ಲ. ಹಾಗೆಯೇ ಕಲ್ಲೆಸೆದ ಬಳಿಕ ಬಲಿ ನೀಡುವುದಕ್ಕೆ ಮೊದಲೇ ತಲೆಗೂದಲನ್ನು ಬೋಳಿಸಿದರೆ ಅದರಲ್ಲಿ ದೋಷವಿಲ್ಲ. ಕಲ್ಲೆಸೆದ ಬಳಿಕ ಮಕ್ಕಾಗೆ ತೆರಳಿ ತವಾಫ್ ಮತ್ತು ಸಅ್‌ಯ್ ನಿರ್ವಹಿಸಿದರೆ ಅದರಲ್ಲೂ ದೋಷವಿಲ್ಲ. ಕಲ್ಲೆಸೆದು, ಬಲಿನೀಡಿ, ತಲೆಗೂದಲನ್ನು ಬೋಳಿಸಿದ ಬಳಿಕ ಮಕ್ಕಾದೆಡೆಗೆ ತೆರಳಿ ತವಾಫ್ ಮಾಡುವುದಕ್ಕೆ ಮೊದಲು ಸಅ್‌ಯ್ ನಿರ್ವಹಿಸಿದರೆ ಅದರಲ್ಲೂ ದೋಷವಿಲ್ಲ. ಇದು ಅಲ್ಲಾಹು ಸುಬ್‌ಹಾನಹು ವತಆಲಾ ಸುಲಭಗೊಳಿಸಿದ್ದಾಗಿದೆ ಮತ್ತು ಅವನ ದಾಸರೊಂದಿಗೆ ಅವನು ತೋರಿಸಿದ ಕರುಣೆಯಾಗಿದೆ.

* ಇವುಗಳನ್ನು ನಿರ್ವಹಿಸಿದ ಬಳಿಕವಿರುವ ಹಜ್ಜ್ ಕರ್ಮಗಳು ಹೀಗಿವೆ:

ದುಲ್‌ಹಿಜ್ಜಃ ಹನ್ನೊಂದನೆ ರಾತ್ರಿ, ಹನ್ನೆರಡನೆ ರಾತ್ರಿ ಮತ್ತು ತಡಮಾಡುವವರು ದುಲ್‌ಹಿಜ್ಜಃ ಹದಿಮೂರನೆ ರಾತ್ರಿ ಮಿನಾದಲ್ಲಿ ತಂಗಬೇಕು. ಯಾಕೆಂದರೆ ಅಲ್ಲಾಹು ಹೇಳುತ್ತಾನೆ:

﴿وَاذْكُرُوا اللَّهَ فِي أَيَّامٍ مَعْدُودَاتٍ فَمَنْ تَعَجَّلَ فِي يَوْمَيْنِ فَلَا إِثْمَ عَلَيْهِ وَمَنْ تَأَخَّرَ فَلَا إِثْمَ عَلَيْهِ لِمَنِ اتَّقَى﴾

**"ಎಣಿಸಲಾದ ದಿನಗಳಲ್ಲಿ ಅಲ್ಲಾಹನನ್ನು ಸ್ಮರಿಸಿರಿ. ಯಾರಾದರೂ ಆತುರಪಟ್ಟು ಎರಡೇ ದಿನಗಳಲ್ಲಿ (ಮಿನಾದಿಂದ ಹೊರಟರೆ) ಅವನ ಮೇಲೆ ದೋಷವಿಲ್ಲ. ಇನ್ನು ಯಾರಾದರೂ ತಡಮಾಡಿದರೆ (ಅಂದರೆ ಮೂರು ದಿನ ಮಿನಾದಲ್ಲಿ ತಂಗಿದರೆ) ಅವನ ಮೇಲೂ ದೋಷವಿಲ್ಲ. ಭಯಭಕ್ತಿ ಪಾಲಿಸುವವನಿಗೆ (ಇದು ಉತ್ತಮ ವಾಗಿದೆ)." [ಕುರ್‌ಆನ್ 2:203]**

ಆದ್ದರಿಂದ ಹಾಜಿ ದುಲ್‌ಹಿಜ್ಜಃ ಹನ್ನೊಂದನೆ ರಾತ್ರಿ ಮತ್ತು ಹನ್ನೆರಡನೆ ರಾತ್ರಿ ಮಿನಾದಲ್ಲಿ ತಂಗಬೇಕು. ಈ ಎರಡು ರಾತ್ರಿಗಳಲ್ಲಿ ಅವುಗಳ ಬಹುಭಾಗ ತಂಗಿದರೂ ಸಾಕಾಗುವುದು.

* ದುಲ್‌ಹಿಜ್ಜಃ ಹನ್ನೊಂದನೆ ದಿನ ಮಧ್ಯಾಹ್ನದ ನಂತರ ಮೂರು ಜಮ್ರಃಗಳಿಗೆ ಕಲ್ಲೆಸೆಯಬೇಕು. ಮೊಟ್ಟಮೊದಲು ಚಿಕ್ಕ ಜಮ್ರಃಕ್ಕೆ ಅಂದರೆ ಇತರ ಜಮ್ರಃಗಳಿಗೆ ಹೋಲಿಸಿದರೆ ಪೂರ್ವದಿಕ್ಕಿನಲ್ಲಿರುವ ಜಮ್ರಃಕ್ಕೆ ಏಳು ಹರಳುಗಲ್ಲು ಗಳನ್ನು ಒಂದರ ನಂತರ ಒಂದರಂತೆ ಎಡೆಬಿಡದೆ ಎಸೆಯಬೇಕು. ಪ್ರತಿಯೊಂದು ಎಸೆತದೊಂದಿಗೆ ತಕ್ಬೀರ್ (ಅಲ್ಲಾಹು ಅಕ್ಬರ್) ಹೇಳಬೇಕು. ನಂತರ ಜನಸಂದಣಿಯಿಂದ ಸ್ವಲ್ಪ ಮುಂದಕ್ಕೆ ಚಲಿಸಿ, ಅಲ್ಲಿ ನಿಂತು, ಕಿಬ್ಲದೆಡೆಗೆ ತಿರುಗಿ, ಕೈಗಳನ್ನೆತ್ತಿ, ಅಲ್ಲಾಹನೊಂದಿಗೆ ಸುದೀರ್ಘವಾಗಿ ಪ್ರಾರ್ಥಿಸಬೇಕು. ನಂತರ ಮಧ್ಯದಲ್ಲಿರುವ ಜಮ್ರಃದೆಡೆಗೆ ತೆರಳಿ, ಅದಕ್ಕೆ ಏಳು ಹರಳುಗಲ್ಲುಗಳನ್ನು ಒಂದರ ನಂತರ ಒಂದರಂತೆ ಎಡೆಬಿಡದೆ ಎಸೆಯಬೇಕು. ಪ್ರತಿಯೊಂದು ಎಸೆತದೊಂದಿಗೂ ತಕ್ಬೀರ್ (ಅಲ್ಲಾಹು ಅಕ್ಬರ್) ಹೇಳಬೇಕು. ನಂತರ ಜನಸಂದಣಿಯಿಂದ ಸ್ವಲ್ಪ ಮುಂದಕ್ಕೆ ಚಲಿಸಿ, ಅಲ್ಲಿ ನಿಂತು, ಕಿಬ್ಲದೆಡೆಗೆ ತಿರುಗಿ,

ಕೈಗಳನ್ನೆತ್ತಿ, ಅಲ್ಲಾಹನೊಂದಿಗೆ ಸುದೀರ್ಘವಾಗಿ ಪ್ರಾರ್ಥಿಸಬೇಕು. ನಂತರ ಜಮ್ರತುಲ್ ಅಕಬಃದೆಡೆಗೆ ತೆರಳಿ, ಅದಕ್ಕೆ ಏಳು ಹರಳುಗಲ್ಲುಗಳನ್ನು ಒಂದರ ನಂತರ ಒಂದರಂತೆ ಎಡೆಬಿಡದೆ ಎಸೆಯಬೇಕು. ಪ್ರತಿಯೊಂದು ಎಸೆತ ದೊಂದಿಗೂ ತಕ್ಬೀರ್ (ಅಲ್ಲಾಹು ಅಕ್ಬರ್) ಹೇಳಬೇಕು. ಆದರೆ ನಂತರ ಅಲ್ಲಿ ನಿಲ್ಲಬಾರದು. ಇದು ಪ್ರವಾದಿಚರ್ಯೆಯ ಅನುಸರಣೆಯಾಗಿದೆ.

* ದುಲ್‌ಹಿಜ್ಜಃ ಹನ್ನೆರಡನೆ ರಾತ್ರಿ ಈ ಮೇಲೆ ಹೇಳಿದಂತೆಯೇ ಮೂರು ಜಮ್ರಃಗಳಿಗೂ ಕಲ್ಲೆಸೆಯಬೇಕು. ದುಲ್‌ಹಿಜ್ಜಃ ಹನ್ನೆರಡನೆ ರಾತ್ರಿ ಹಾಜಿ ಜಮ್ರಃಗಳಿಗೆ ಕಲ್ಲೆಸೆಯುವುದನ್ನು ಮುಗಿಸಿದರೆ, ಆತುರಪಟ್ಟು ಮಿನಾದಿಂದ ಹೊರಡಬಹುದು. ಆತುರಪಟ್ಟು ಹೊರಡದೆ ತಡಮಾಡುವವರು ಹದಿಮೂರನೆ ರಾತ್ರಿಯೂ ಮಿನಾದಲ್ಲಿ ತಂಗಿ, ಈಗಾಗಲೇ ಹೇಳಿದ ರೀತಿಯಲ್ಲಿ ಮಧ್ಯಾಹ್ನದ ನಂತರ ಜಮ್ರಃಗಳಿಗೆ ಕಲ್ಲೆಸೆಯಬೇಕು. ತಡಮಾಡುವುದು ಶ್ರೇಷ್ಠಕರವಾಗಿದೆ. ದುಲ್‌ಹಿಜ್ಜಃ ಹನ್ನೆರಡನೆ ದಿನದಂದು ಸೂರ್ಯಾಸ್ತವಾಗುವ ತನಕ ಹಾಜಿ ಹದಿಮೂರನೆ ದಿನವೂ ಮಿನಾದಲ್ಲಿ ತಂಗುವುದು ಕಡ್ಡಾಯವಿಲ್ಲ. ಆದರೆ ಸೂರ್ಯಾಸ್ತವಾದ ಬಳಿಕವೂ ಹಾಜಿ ಮಿನಾದಲ್ಲೇ ಇದ್ದರೆ ನಂತರ ಮಿನಾ ಬಿಟ್ಟು ಹೊರಡಲು ಅನುಮತಿಯಿಲ್ಲ. ಅವನು ಹದಿಮೂರನೆ ದಿನವೂ ಮಿನಾದಲ್ಲಿ ಜಮ್ರಃಗಳಿಗೆ ಕಲ್ಲೆಸೆಯುವುದಕ್ಕಾಗಿ ಅಲ್ಲಿ ತಂಗಬೇಕಾಗುತ್ತದೆ. ಆದರೆ ಹಾಜಿಯು ಸೂರ್ಯಾಸ್ತವಾಗುವ ತನಕ ಉದ್ದೇಶಪೂರ್ವಕವಾಗಿ ತಂಗದಿದ್ದಲ್ಲಿ ಆ ರಾತ್ರಿ ಕೂಡ ಮಿನಾದಲ್ಲಿ ತಂಗುವುದು ಕಡ್ಡಾಯವಿಲ್ಲ. ಯಾಕೆಂದರೆ ಆತ ಸೂರ್ಯಾಸ್ತವಾಗುವ ತನಕ ತಂಗಿದ್ದು ಉದ್ದೇಶಪೂರ್ವಕವಾಗಿರಲಿಲ್ಲ.

* ದುಲ್‌ಹಿಜ್ಜಃ ಹನ್ನೊಂದನೆ ದಿನ, ಹನ್ನೆರಡನೆ ದಿನ ಮತ್ತು ಹದಿಮೂರನೆ ದಿನ ಮಧ್ಯಾಹ್ನಕ್ಕೆ ಮುಂಚೆ ಜಮ್ರಃಗಳಿಗೆ ಕಲ್ಲೆಸೆಯುವುದಕ್ಕೆ ಅನುಮತಿಯಿಲ್ಲ. ಯಾಕೆಂದರೆ ಪ್ರವಾದಿ(ﷺ)ರವರು ಮಧ್ಯಾಹ್ನದ ನಂತರವಲ್ಲದೆ ಜಮ್ರಃಗಳಿಗೆ ಕಲ್ಲೆಸೆದಿಲ್ಲ. ಪ್ರವಾದಿ(ﷺ)ರವರು ಹೇಳಿದರು:

« خُذُوا عَنِّي مَنَاسِكَكُمْ »

**“ನಿಮ್ಮ ಹಜ್ಜ್ ಕರ್ಮಗಳನ್ನು ನನ್ನಿಂದ ಪಡೆದುಕೊಳ್ಳಿರಿ.” [ಮುಸ್ಲಿಮ್]**

ಸಹಾಬಾಗಳು ಮಧ್ಯಾಹ್ನವಾಗುವುದನ್ನು ಕಾಯುತ್ತಿದ್ದರು. ಮಧ್ಯಾಹ್ನದ ನಂತರ ಅವರು ಕಲ್ಲೆಸೆಯುತ್ತಿದ್ದರು. ಒಂದು ವೇಳೆ ಮಧ್ಯಾಹ್ನಕ್ಕೆ ಮುಂಚೆ ಕಲ್ಲೆಸೆಯುವುದಕ್ಕೆ ಅನುಮತಿಯಿರುತ್ತಿದ್ದರೆ ಪ್ರವಾದಿ(ﷺ)ರವರು ಅದನ್ನು ತಮ್ಮ ಮಾತಿನ ಮೂಲಕ, ಅಥವಾ ಕ್ರಿಯೆಯ ಮೂಲಕ, ಅಥವಾ ಅಂಗೀಕಾರದ ಮೂಲಕ ವಿವರಿಸಿ ಕೊಡುತ್ತಿದ್ದರು.

* ಆದರೆ ಜನಸಂದಣಿಯಿಂದಾಗಿ ಮಧ್ಯಾಹ್ನದ ನಂತರ ಜಮ್ರಃಗಳೆಡೆಗೆ ತೆರಳಿ ಕಲ್ಲೆಸೆಯಲು ಕಷ್ಟವಾಗುವುದಾದರೆ, ರಾತ್ರಿಯವರೆಗೆ ಅದನ್ನು ತಡಮಾಡಬಹುದಾಗಿದೆ. ಯಾಕೆಂದರೆ ರಾತ್ರಿಯು ಕಲ್ಲೆಸೆಯುವುದಕ್ಕಿರುವ ಸಮಯವಾಗಿದೆ. ರಾತ್ರಿಯಲ್ಲಿ ಕಲ್ಲೆಸೆದರೆ ಸಿಂಧುವಾಗಲಾರದು ಎಂದು ಹೇಳುವುದಕ್ಕೆ ಯಾವುದೇ ಪುರಾವೆಯಿಲ್ಲ. ಪ್ರವಾದಿ(ﷺ)ರವರು ಜಮ್ರಃಗಳಿಗೆ ಕಲ್ಲೆಸೆಯುವುದನ್ನು ಆರಂಭಿಸಬೇಕಾದ ಸಮಯ ವನ್ನು ನಿಶ್ಚಯಿಸಿದರೇ ವಿನಾ ಅದನ್ನು ಕೊನೆಗೊಳಿಸಬೇಕಾದ ಸಮಯವನ್ನು ನಿಶ್ಚಯಿಸಿಲ್ಲ. ಆದ್ದರಿಂದ ಯಾವ ವಿಷಯವು ಅನಿರ್ಬಂಧಿತವಾಗಿದೆಯೋ, ಅದನ್ನು ನಿರ್ಬಂಧಿತಗೊಳಿಸುವ ಕಾರಣ ಅಥವಾ ಸಮಯವು ಪುರಾವೆಸಹಿತ ಸಾಬೀತಾಗುವ ತನಕ ಅದು ಅನಿರ್ಬಂಧಿತವಾಗಿಯೇ ಉಳಿಯುತ್ತದೆಯೆಂಬುದು ಮೂಲನಿಯಮವಾಗಿದೆ.

* ಜಮ್ರಃಗಳಿಗೆ ಕಲ್ಲೆಸೆಯುವ ವಿಷಯದಲ್ಲಿ ಅಸಡ್ಡೆ ತೋರುವುದರ ಬಗ್ಗೆ ಹಾಜಿಯು ಎಚ್ಚರಿಕೆ ವಹಿಸಬೇಕಾಗಿದೆ. ಯಾಕೆಂದರೆ ಈ ವಿಷಯದಲ್ಲಿ ಕೆಲವರು ಅಸಡ್ಡೆ ವಹಿಸುತ್ತಾರೆ. ಜಮ್ರಃಗಳಿಗೆ ಕಲ್ಲೆಸೆಯುವ ಶಕ್ತಿಯಿದ್ದೂ ಸಹ ಅವರು ತಮ್ಮ ಪರವಾಗಿ ಕಲ್ಲೆಸೆಯುವುದನ್ನು ಬೇರೆಯವರಿಗೆ ವಹಿಸಿಕೊಡುತ್ತಾರೆ. ಇದಕ್ಕೆ ಅನುಮತಿಯಿಲ್ಲ. ಹೀಗೆ ಕಲ್ಲೆಸೆಯುವುದನ್ನು ಬೇರೆಯವರಿಗೆ ವಹಿಸಿಕೊಟ್ಟರೆ ಅದು ಸಾಕಾಗದು. ಯಾಕೆಂದರೆ ಅಲ್ಲಾಹು ತಆಲಾ ಅವನ ಗ್ರಂಥದಲ್ಲಿ ಹೇಳುತ್ತಾನೆ:

﴿وَأَتِمُّوا الْحَجَّ وَالْعُمْرَةَ لِلَّهِ﴾

**“ನೀವು ಹಜ್ಜ್ ಮತ್ತು ಉಮ್ರಾಗಳನ್ನು ಅಲ್ಲಾಹನಿಗೋಸ್ಕರ ಪೂರ್ಣಗೊಳಿಸಿರಿ.” [ಕುರ್‌ಆನ್ 2:196]**

ಕಲ್ಲೆಸೆತವು ಹಜ್ಜ್ ಕರ್ಮಗಳಲ್ಲಿ ಒಳಪಟ್ಟದ್ದಾಗಿದೆ. ಆದ್ದರಿಂದ ಆ ವಿಷಯದಲ್ಲಿ ಅಸಡ್ಡೆ ವಹಿಸುವುದಕ್ಕೆ ಅನುಮತಿಯಿಲ್ಲ. ಯಾಕೆಂದರೆ ಕಲ್ಲೆಸೆತವನ್ನು ಇತರರಿಗೆ ವಹಿಸಿಕೊಡುವುದನ್ನು ಪ್ರವಾದಿ(ﷺ)ರವರು ತಮ್ಮ ಕುಟುಂಬದಲ್ಲಿ ಸೇರಿದ ದುರ್ಬಲರಿಗೂ ಅನುಮತಿಸಲಿಲ್ಲ. ಬದಲಾಗಿ ರಾತ್ರಿಯ ಕೊನೆಯ ಭಾಗದಲ್ಲಿ ಜನಸಂದಣಿಯುಂಟಾಗುವುದಕ್ಕೆ ಮೊದಲೇ ಮುಝ್ದಲಿಫಾದಿಂದ ತೆರಳಿ ಸ್ವತಃ ಕಲ್ಲೆಸೆಯಲು ಅವರಿಗೆ ಅನುಮತಿ ನೀಡಿದರು. ಆದರೆ ಅನಿವಾರ್ಯ ಪರಿಸ್ಥಿತಿ ಗಳಲ್ಲಿ ಕಲ್ಲೆಸೆತವನ್ನು ಇತರರಿಗೆ ವಹಿಸಿಕೊಡುವುದರಲ್ಲಿ ತೊಂದರೆಯಿಲ್ಲ. ಉದಾಹರಣೆಗೆ, ಹಾಜಿ ರೋಗಿಯಾಗಿದ್ದರೆ, ಅಥವಾ ವಯೋವೃದ್ಧನಾಗಿದ್ದು ಜಮ್ರಃಗಳೆಡೆಗೆ ತೆರಳುವ ಶಕ್ತಿಯಿಲ್ಲದಿದ್ದರೆ, ಅಥವಾ ಮಹಿಳೆಯು ಗರ್ಭಿಣಿ ಯಾಗಿದ್ದು ಸ್ವತಃ ತನ್ನ ಬಗ್ಗೆ ಅಥವಾ ತನ್ನ ಮಗುವಿನ ಬಗ್ಗೆ ಭಯಪಟ್ಟರೆ, ಇಂತಹ ಪರಿಸ್ಥಿತಿಗಳಲ್ಲಿ ಕಲ್ಲೆಸತವನ್ನು ಇತರರಿಗೆ ವಹಿಸಿಕೊಡಲು ಅನುಮತಿಯಿದೆ.

* ಅಲ್ಲಾಹನ ಲಾಂಛನಗಳನ್ನು ಗೌರವಿಸುವುದು ಮತ್ತು ಅವುಗಳಿಗೆ ಅಗೌರವ ತೋರದಿರುವುದು ನಮ್ಮ ಮೇಲೆ ಕಡ್ಡಾಯವಾಗಿದೆ. ನಮಗೆ ಮಾಡಲು ಸಾಧ್ಯವಾಗುವುದನ್ನು ಸ್ವತಃ ನಾವೇ ಮಾಡುವುದು ಕೂಡ ಕಡ್ಡಾಯ ವಾಗಿದೆ. ಯಾಕೆಂದರೆ ಅದು ಇಬಾದತ್ ಆಗಿದೆ. ಪ್ರವಾದಿ(ﷺ)ರವರು ಹೇಳಿದಂತೆ:

« إِنَّمَا جُعِلَ الطَّوَافُ بِالْبَيْتِ وَبِالصَّفَا وَالْمَرْوَةِ وَرَمْيُ الْجَمَرَاتِ لِإِقَامَةِ ذِكْرِ اللَّهِ »

**“ಕಅ್‌ಬಾಲಯಕ್ಕೆ ತವಾಫ್ ಮಾಡುವುದು, ಸಫಾ ಮತ್ತು ಮರ್ವಾದ ಮಧ್ಯೆ ತವಾಫ್ ಮಾಡುವುದು ಮತ್ತು ಜಮ್ರಃಗಳಿಗೆ ಕಲ್ಲೆಸೆಯುವುದು ಮೊದಲಾದವು ಗಳನ್ನು ನಿಶ್ಚಯಿಸಲಾಗಿರುವುದು ಅಲ್ಲಾಹನ ಸ್ಮರಣೆಯನ್ನು ನೆಲೆನಿಲ್ಲಿಸುವುದ ಕ್ಕಾಗಿದೆ.”** [ಅಬೂ ದಾವೂದ್, ಅತ್ತಿರ್ಮಿದೀ]

*   ಹಾಜಿ ಜಮ್ರಃಗಳಿಗೆ ಕಲ್ಲೆಸೆದ ಬಳಿಕ ತವಾಫುಲ್ ವಿದಾಅ್ ನಿರ್ವಹಿಸದೆ ಮಕ್ಕಾದಿಂದ ಹೊರಡಬಾರದು. ಯಾಕೆಂದರೆ ಇಬ್ನ್ ಅಬ್ಬಾಸ್(ﷺ)ರವರ ಹದೀಸಿನಲ್ಲಿರುವಂತೆ ಅವರು (ಇಬ್ನ್ ಅಬ್ಬಾಸ್) ಹೇಳುತ್ತಾರೆ:

كَانَ النَّاسُ يَنْفِرُونَ مِنْ كُلِّ وَجْهٍ، فَقَالَ النَّبِيُّ صَلَّى اللَّهُ عَلَيْهِ وَسَلَّمَ: « لَا يَنْفِرُ أَحَدٌ حَتَّى يَكُونَ آخِرُ عَهْدِهِ بِالْبَيْتِ »

**“ಜನರು ಎಲ್ಲ ದಿಕ್ಕುಗಳಿಂದಲೂ (ಮಕ್ಕಾದಿಂದ) ಹೊರಡುತ್ತಿದ್ದರು. ಆಗ ಪ್ರವಾದಿ (ﷺ)ರವರು ಹೇಳಿದರು: ನಿಮ್ಮಲ್ಲಿ ಯಾರೊಬ್ಬರೂ ಅವನ ಕೊನೆಯ ಸಮಯವು ಕಅ್‌ಬಾಲಯದಲ್ಲಾಗಿರುವ ಹೊರತು (ಮಕ್ಕಾದಿಂದ) ಹೊರಡಬಾರದು.” [ಮುಸ್ಲಿಮ್]**

ಆದರೆ ಒಬ್ಬ ಮಹಿಳೆ ಋತುಸ್ರಾವವಿರುವವಳಾಗಿದ್ದರೆ, ಮತ್ತು ಆಕೆ ಈಗಾಗಲೇ ತವಾಫುಲ್ ಇಫಾದಃ ನಿರ್ವಹಿಸಿದವಳಾಗಿದ್ದರೆ, ಆಕೆ ತವಾಫುಲ್ ವಿದಾಅ್ ನಿರ್ವಹಿಸಬೇಕಾಗಿಲ್ಲ. ಯಾಕೆಂದರೆ ಇಬ್ನ್ ಅಬ್ಬಾಸ್(ﷺ)ರವರ ಹದೀಸಿನಲ್ಲಿ ಹೀಗಿದೆ:

أَمَرَ النَّاسَ أَنْ يَكُونَ آخِرُ عَهْدِهِمْ بِالْبَيْتِ، إِلَّا أَنَّهُ خُفِّفَ عَنِ الْحَائِضِ

**“ಜನರ ಕೊನೆಯ ಸಮಯವು ಕಅ್‌ಬಾಲಯದಲ್ಲಾಗಿರಬೇಕೆಂದು ಪ್ರವಾದಿ(ﷺ) ರವರು ಜನರಿಗೆ ಆದೇಶ ನೀಡಿದ್ದಾರೆ. ಆದರೆ ಅವರು ಋತುಸ್ರಾವವಿರುವವರಿಗೆ ರಿಯಾಯಿತಿ ನೀಡಲಾಗಿದೆ.” [ಅಲ್‌ಬುಖಾರೀ ಮತ್ತು ಮುಸ್ಲಿಮ್]**

ಸಫಿಯ್ಯ(ﷺ)ರವರು ತವಾಫುಲ್ ಇಫಾದಃ ನಿರ್ವಹಿಸದ್ದಾರೆಂದು ಪ್ರವಾದಿ(ﷺ) ರವರೊಂದಿಗೆ ಹೇಳಲಾದಾಗ, ಅವರು ಹೇಳಿದರು:

« فَلْتَنْفِرْ إِذَنْ »

**“ಹಾಗಾದರೆ ಆಕೆ ಹೊರಡಲಿ.” [ಅಲ್‌ಬುಖಾರೀ ಮತ್ತು ಮುಸ್ಲಿಮ್]**

ಸಫಿಯ್ಯಃ(ﷺ) ಆಗ ಋತುಸ್ರಾವವಿರುವವರಾಗಿದ್ದರು.

* ತವಾಫುಲ್ ವಿದಾಅ್ ಕೊನೆಯ ಕರ್ಮವಾಗಿರಬೇಕು. ಕೆಲವು ಜನರು ಮಿನಾದಿಂದ ಮಕ್ಕಾಗೆ ಬಂದು ತವಾಫುಲ್ ವಿದಾಅ್ ನಿರ್ವಹಿಸಿ, ತರುವಾಯ ಪುನಃ ಮಿನಾಗೆ ತೆರಳಿ, ಅಲ್ಲಿ ಜಮ್ರಃಗಳಿಗೆ ಕಲ್ಲೆಸೆದು, ಅಲ್ಲಿಂದಲೇ ನೇರವಾಗಿ ತಮ್ಮ ಊರುಗಳಿಗೆ ಹೊರಡುತ್ತಾರೆ. ಇದು ತಪ್ಪು. ಅವರು ನಿರ್ವಹಿಸಿದ ತವಾಫುಲ್ ವಿದಾಅ್ ಸಿಂಧುವಾಗುವುದಿಲ್ಲ. ಯಾಕೆಂದರೆ ಅವರು ಅದನ್ನು ಕೊನೆಯ ಕರ್ಮವಾಗಿ ನಿರ್ವಹಿಸಿಲ್ಲ. ಅವರ ಕೊನೆಯ ಸಮಯವು ಜಮ್ರಃಗಳಲ್ಲಾಗಿತ್ತು.

## ಉಮ್ರಾದ ಕರ್ಮಗಳು ಸಂಕ್ಷಿಪ್ತವಾಗಿ

1. ಜನಾಬತ್‌ಗಾಗಿ ಸ್ನಾನ ಮಾಡುವಂತೆ ಸ್ನಾನ ಮಾಡುವುದು ಮತ್ತು ಸುಗಂಧ ಹಚ್ಚುವುದು.

2. ಇಹ್ರಾಮ್‌ನ ಬಟ್ಟೆಗಳನ್ನು ಧರಿಸುವುದು. ಅಂದರೆ ಪುರುಷರು ಇಝಾರ್ ಮತ್ತು ರಿದಾಅ್ ಧರಿಸಬೇಕು, ಹಾಗೂ ಮಹಿಳೆಯರು ಅವರಿಗೆ ಧರಿಸಲು ಅನುಮತಿಯಿರುವ ಯಾವುದೇ ಉಡುಪನ್ನೂ ಧರಿಸಬಹುದು.

3. ತಲ್ಬಿಯತ್ ಉಚ್ಚರಿಸುವುದು ಮತ್ತು ತವಾಫ್ ಮಾಡುವ ತನಕ ಅದನ್ನು ಹೇಳುತ್ತಲೇ ಇರುವುದು.

4. ಅಲ್‌ಹಜರುಲ್ ಅಸ್ವದ್‌ನಿಂದ ಆರಂಭಿಸಿ ಅಲ್ಲಿಗೇ ಕೊನೆಗೊಳ್ಳುವಂತೆ ಏಳು ಬಾರಿ ಕಅ್‌ಬಾಲಯವನ್ನು ಪ್ರದಕ್ಷಿಣೆ ಮಾಡುವುದು.

5. ಮಕಾಮ್ ಇಬ್ರಾಹೀಮ್‌ನ ಹಿಂದೆ ಎರಡು ರಕ್‌ಅತ್ ನಮಾಝ್ ನಿರ್ವಹಿಸುವುದು.

6. ಸಫಾದಿಂದ ಆರಂಭಿಸಿ ಮರ್ವಾದಲ್ಲಿ ಕೊನೆಗೊಳ್ಳುವಂತೆ ಏಳು ಬಾರಿ ಸಫಾ ಮರ್ವಾಗಳಿಗೆ ಸಅ್ಯ್ ಮಾಡುವುದು.

7. ಪುರುಷರು ತಲೆಗೂದಲನ್ನು ಬೋಳಿಸುವುದು ಅಥವಾ ಗಿಡ್ಡಗೊಳಿಸುವುದು ಮತ್ತು ಮಹಿಳೆಯರು ತಲೆಗೂದಲನ್ನು ಕತ್ತರಿಸುವುದು.

## ಹಜ್ಜ್ ಕರ್ಮಗಳು ಸಂಕ್ಷಿಪ್ತವಾಗಿ

**ಮೊದಲನೆಯ ದಿನ, ಅಂದರೆ ದುಲ್‌ಹಿಜ್ಜಃ ಎಂಟರಂದು ಮಾಡುವ ಕರ್ಮಗಳು:**

1. ತಾನಿರುವ ಸ್ಥಳದಿಂದಲೇ ಹಜ್ಜ್‌ಗಾಗಿ ಇಹ್ರಾಮ್ ಮಾಡುವುದು, ಸ್ನಾನ ಮಾಡುವುದು, ಸುಗಂಧ ಹಚ್ಚುವುದು, ಇಹ್ರಾಮ್‌ನ ಉಡುಪುಗಳನ್ನು ಧರಿಸುವುದು ಮತ್ತು ಹೀಗೆ ಹೇಳುವುದು:

« لَبَّيْكَ حَجًّا، لَبَّيْكَ اللَّهُمَّ لَبَّيْكَ، لَبَّيْكَ لَا شَرِيكَ لَكَ لَبَّيْكَ، إِنَّ الْحَمْدَ وَالنِّعْمَةَ لَكَ وَالْمُلْكُ، لَا شَرِيكَ لَكَ »

**"ಲಬ್ಬೈಕ ಹಜ್ಜನ್, ಲಬ್ಬೈಕಲ್ಲಾಹುಮ್ಮ ಲಬ್ಬೈಕ್, ಲಬ್ಬೈಕ ಲಾ ಶರೀಕ ಲಕ ಲಬ್ಬೈಕ್, ಇನ್ನಲ್ ಹಮ್ದ ವನ್ನಿಅ್‌ಮತ ಲಕ ವಲ್ ಮುಲ್ಕ್, ಲಾ ಶರೀಕ ಲಕ್."**

2. ಮಿನಾಗೆ ತೆರಳಿ ದುಲ್‌ಹಿಜ್ಜಃ ಒಂಬತ್ತನೇ ದಿನ ಸೂರ್ಯೋದಯದ ತನಕ ಅಲ್ಲೇ ತಂಗುವುದು, ದುಲ್‌ಹಿಜ್ಜಃ ಎಂಟನೇ ದಿನದ ಝುಹ್ರ್, ಅಸ್ರ್, ಮಗ್ರಿಬ್, ಇಶಾ ಮತ್ತು ಮರುದಿನದ ಫಜ್ರ್ ನಮಾಝ್‌ಗಳನ್ನು ಅವುಗಳ ಸಮಯದಲ್ಲೇ ನಿರ್ವಹಿಸುವುದು. ನಾಲ್ಕು ರಕ್ಅತ್‌ಗಳ ನಮಾಝ್‌ಗಳನ್ನು ಎರಡು ರಕ್ಅತ್‌ಗಳಾಗಿ ನಿರ್ವಹಿಸುವುದು.

**ಎರಡನೆಯ ದಿನ, ಅಂದರೆ ದುಲ್‌ಹಿಜ್ಜಃ ಒಂಬತ್ತರಂದು ಮಾಡುವ ಕರ್ಮಗಳು:**

1. ಸೂರ್ಯೋದಯದ ಬಳಿಕ ಅರಫಃಕ್ಕೆ ತೆರಳುವುದು, ಅಲ್ಲಿ ಝುಹ್ರ್ ಮತ್ತು ಅಸ್ರ್ ನಮಾಝ್‌ಗಳನ್ನು ಜಮ್‌ಅ್ ತಕ್ದೀಮ್ ಮತ್ತು ಕಸ್ರ್ ಆಗಿ ನಿರ್ವಹಿಸುವುದು. ಸಾಧ್ಯವಾದರೆ ಮಧ್ಯಾಹ್ನಕ್ಕೆ ಮುಂಚೆ ನಮಿರಃದಲ್ಲಿ ಇಳಿಯುವುದು.

2. ನಮಾಝ್‌ನ ಬಳಿಕ ದಿಕ್ರ್ ದುಆಗಳಲ್ಲಿ ಮಗ್ನರಾಗುವುದು. ದುಆ ಮಾಡುವಾಗ ಕಿಬ್ಲದೆಡೆಗೆ ತಿರುಗಿ ಕೈಗಳನ್ನೆತ್ತುವುದು. ಸೂರ್ಯಾಸ್ತದ ತನಕ ಅರಫಃದಲ್ಲೇ ಉಳಿಯುವುದು.

3. ಸೂರ್ಯಾಸ್ತದ ಬಳಿಕ ಮುಝ್ದಲಿಫಾಗೆ ತೆರಳಿ, ಅಲ್ಲಿ ಮಗ್ರಿಬ್ ಮತ್ತು ಇಶಾ ನಮಾಝ್ ನಿರ್ವಹಿಸುವುದು. ಇಶಾ ನಮಾಝನ್ನು ಎರಡು ರಕ್‌ಅತ್ ಆಗಿ ನಿರ್ವಹಿಸುವುದು. ಪ್ರಭಾತೋದಯದ ತನಕ ಅಲ್ಲೇ ಉಳಿಯುವುದು.

4. ಪ್ರಭಾತೋದಯದ ಬಳಿಕ ಫಜ್ರ್ ನಮಾಝ್ ನಿರ್ವಹಿಸುವುದು. ನಂತರ ಸೂರ್ಯ ಕೆಂಬಣ್ಣಕ್ಕೆ ತಿರುಗುವ ತನಕ ದಿಕ್ರ್ ದುಆಗಳಲ್ಲಿ ನಿರತರಾಗುವುದು.

**ಮೂರನೆಯ ದಿನ, ಅಂದರೆ ದುಲ್‌ಹಿಜ್ಜಃ ಹತ್ತರಂದು ಮಾಡುವ ಕರ್ಮಗಳು:**

1. ಮಿನಾಗೆ ತಲುಪಿದೊಡನೆ ಜಮ್ರತುಲ್ ಅಕಬಾಕ್ಕೆ ಏಳು ಹರಳುಗಲ್ಲುಗಳನ್ನು ಒಂದರ ನಂತರ ಒಂದರಂತೆ ಎಡೆಬಿಡದೆ ಎಸೆಯುವುದು. ಪ್ರತಿಯೊಂದು ಎಸೆತ ದೊಂದಿಗೆ ತಕ್ಬೀರ್ (ಅಲ್ಲಾಹು ಅಕ್ಬರ್) ಹೇಳುವುದು.

2. ಬಲಿಮೃಗವಿದ್ದರೆ ಅದನ್ನು ಬಲಿನೀಡುವುದು.

3. ತಲೆಗೂದಲನ್ನು ಬೋಳಿಸುವುದು ಅಥವಾ ಗಿಡ್ಡಗೊಳಿಸುವುದು. ಇದರೊಂದಿಗೆ ಇಹ್ರಾಮ್‌ನಿಂದ ಮೊದಲ ವಿಮುಕ್ತಿ ಸಿಗುತ್ತದೆ. ನಂತರ ತನ್ನ ಉಡುಪನ್ನು ಧರಿಸಿ ಸುಗಂಧವನ್ನು ಹಚ್ಚುವುದು. ಪತ್ನಿಯನ್ನು ಸಮೀಪಿಸು

ವುದರ ಹೊರತು ಇಹ್ರಾಮ್‌ನ ಇತರೆಲ್ಲ ನಿಷಿದ್ಧಗಳೂ ಇದರೊಂದಿಗೆ ಧರ್ಮಸಮ್ಮತವಾಗುತ್ತವೆ.

4. ಮಕ್ಕಾಗೆ ಬಂದು ಅಲ್ಲಿ ತವಾಫುಲ್ ಇಫಾದಃ ನಿರ್ವಹಿಸುವುದು. ಇದು ಹಜ್ಜ್‌ನ ತವಾಫ್ ಆಗಿದೆ. ಮತ್ತು ಹಜ್ಜ್‌ಗಾಗಿರುವ ಸಅ್‌ಯನ್ನು ಸಫಾ ಮತ್ತು ಮರ್ವಾಗಳ ಮಧ್ಯೆ ನಿರ್ವಹಿಸುವುದು. ಇದು ಹಜ್ಜನ್ನು ತ್ತಮತ್ತುಅ್ ಆಗಿ ನಿರ್ವಹಿಸುವವರಿಗೆ ಇರುವುದಾಗಿದೆ. ಅದೇ ರೀತಿ ಹಜ್ಜನ್ನು ತ್ತಮತ್ತುಅ್ ಆಗಿ ನಿರ್ವಹಿಸದವರು ಮಕ್ಕಾಗೆ ಬರುವಾಗ ನಿರ್ವಹಿಸುವ ತವಾಫುಲ್ ಕುದೂಮ್ ಮತ್ತು ಸಅ್‌ಯ್ ನಿರ್ವಹಿಸದಿದ್ದರೆ ಅವರು ಇದನ್ನು ನಿರ್ವಹಿಸಬೇಕಾಗಿದೆ.

ಇದರೊಂದಿಗೆ ಇಹ್ರಾಮ್‌ನಿಂದ ಎರಡನೆ ವಿಮುಕ್ತಿ ಸಿಗುತ್ತದೆ. ಇದರೊಂದಿಗೆ ಪತ್ನಿಯನ್ನು ಸಮೀಪಿಸುವುದು ಸೇರಿದಂತೆ ಇಹ್ರಾಮ್‌ನ ಎಲ್ಲ ನಿಷಿದ್ಧಗಳೂ ಧರ್ಮ ಸಮ್ಮತವಾಗುತ್ತವೆ.

5. ಮಿನಾದೆಡೆಗೆ ಮರಳುವುದು ಮತ್ತು ದುಲ್‌ಹಿಜ್ಜಃ ಹನ್ನೊಂದನೆ ರಾತ್ರಿಯನ್ನು ಅಲ್ಲಿ ಕಳೆಯುವುದು.

**ನಾಲ್ಕನೆಯ ದಿನ, ಅಂದರೆ ದುಲ್‌ಹಿಜ್ಜಃ ಹನ್ನೊಂದರಂದು ಮಾಡುವ ಕರ್ಮಗಳು:**

1. ಮೂರು ಜಮ್ರಃಗಳಿಗೆ ಕಲ್ಲೆಸೆಯುವುದು. ಮೊದಲನೆ ಜಮ್ರಃ, ಮಧ್ಯದ ಜಮ್ರಃ ಮತ್ತು ಜಮ್ರತುಲ್ ಅಕಬಾ. ಎಲ್ಲ ಜಮ್ರಃಗಳಿಗೂ ಏಳು ಹರಳು ಗಲ್ಲುಗಳನ್ನು ಒಂದರ ನಂತರ ಒಂದರಂತೆ ಎಡೆಬಿಡದೆ ಎಸೆಯುವುದು. ಪ್ರತಿಯೊಂದು ಎಸೆತದೊಂದಿಗೆ ತಕ್ಬೀರ್ (ಅಲ್ಲಾಹು ಅಕ್ಬರ್) ಹೇಳುವುದು. ಕಲ್ಲೆಸೆತವು ಮಧ್ಯಾಹ್ನದ ನಂತರ ವಾಗಿರಬೇಕು. ಮಧ್ಯಾಹ್ನದ ಮೊದಲು ಎಸೆಯುವುದಕ್ಕೆ ಅನುಮತಿಯಿಲ್ಲ. ಮೊದಲ ಜಮ್ರಃಕ್ಕೆ ಮತ್ತು ಎರಡನೆ ಜಮ್ರಃಕ್ಕೆ ಕಲ್ಲೆಸೆದ ಬಳಿಕ ಪ್ರಾರ್ಥಿಸುವುದಕ್ಕಾಗಿ ನಿಲ್ಲುವುದು.

2. ದುಲ್‌ಹಿಜ್ಜಃ ಹನ್ನೆರಡನೆ ರಾತ್ರಿಯನ್ನು ಮಿನಾದಲ್ಲಿ ಕಳೆಯುವುದು.

**ಐದನೆಯ ದಿನ, ಅಂದರೆ ದುಲ್‌ಹಿಜ್ಜಃ ಹನ್ನೆರಡರಂದು ಮಾಡುವ ಕರ್ಮಗಳು:**

1. ನಾಲ್ಕನೆಯ ದಿನಂದಂದು ಎಸೆದಂತೆಯೇ ಜಮ್ರಃಗಳಿಗೆ ಕಲ್ಲೆಸೆಯುವುದು.

2. ಆತುರಪಡುವವರು ಸೂರ್ಯಾಸ್ತಕ್ಕೆ ಮುಂಚೆಯೇ ಮಿನಾದಿಂದ ಹೊರಡುವುದು. ತಡಮಾಡುವವರು ಮಿನಾದಲ್ಲೇ ತಂಗುವುದು.

**ಆರನೆಯ ದಿನ, ಅಂದರೆ ದುಲ್‌ಹಿಜ್ಜಃ ಹದಿಮೂರರಂದು ಮಾಡುವ ಕರ್ಮಗಳು:**

ಇದು ತಡಮಾಡುವವರಿಗೆ ಮಾತ್ರ ವಿಶೇಷವಾಗಿರುವ ದಿನವಾಗಿದೆ.

1. ಹಿಂದಿನ ಎರಡು ದಿನಗಳಲ್ಲಿ ಎಸೆದಂತೆಯೇ ಜಮ್ರಃಗಳಿಗೆ ಕಲ್ಲೆಸೆಯುವುದು.

2. ಕಲ್ಲೆಸೆದ ಬಳಿಕ ಮಿನಾದಿಂದ ಹೊರಡುವುದು.

ಕೊನೆಯ ಕರ್ಮವು ತವಾಫುಲ್ ವಿದಾಅ್ ಆಗಿರಬೇಕು. ಅದರ ನಂತರ ಊರಿಗೆ ಯಾತ್ರೆ ಹೊರಡಬೇಕು. ಅಲ್ಲಾಹು ಅಅ್‌ಲಮ್.

## ಹಜ್ಜ್ ಕರ್ಮಗಳ ವಿಧಗಳು

ಹಜ್ಜ್ ಕರ್ಮಗಳು ಮೂರು ವಿಧಗಳಲ್ಲಿವೆ:

1. **ಅತ್ತಮತ್ತುಅ್:** ಹಜ್ಜ್‌ನ ತಿಂಗಳುಗಳಲ್ಲಿ ಉಮ್ರಃಕ್ಕೆ ಮಾತ್ರ ಇಹ್ರಾಮ್ ಮಾಡುವುದು. ಮಕ್ಕಃ ತಲುಪಿದೊಡನೆ ತವಾಫ್ ಮತ್ತು ಸಅ್‌ಯ್ ನಿರ್ವಹಿಸುವುದು. ನಂತರ ತಲೆಗೂದಲನ್ನು ಬೋಳಿಸುವುದು ಅಥವಾ ಗಿಡ್ಡಗೊಳಿಸುವುದು. ಯೌಮು ತ್ತರ್ವಿಯಃದಂದು, ಅಂದರೆ ದುಲ್‌ಹಿಜ್ಜಃ ಎಂಟರಂದು ಹಜ್ಜ್‌ಗಾಗಿ ಮಾತ್ರ ಇಹ್ರಾಮ್ ಮಾಡುವುದು ಮತ್ತು ಅದರ ಎಲ್ಲ ಕರ್ಮಗಳನ್ನು ನಿರ್ವಹಿಸುವುದು.

2. **ಅಲ್‌ಇಫ್ರಾದ್:** ಹಜ್ಜ್‌ಗಾಗಿ ಮಾತ್ರ ಇಹ್ರಾಮ್ ಮಾಡುವುದು. ಮಕ್ಕಃ ತಲುಪಿದೊಡನೆ ಹಜ್ಜ್‌ಗಾಗಿರುವ ತವಾಫುಲ್ ಕುದೂಮ್ ಮತ್ತು ಸಅ್‌ಯ್ ನಿರ್ವಹಿಸುವುದು. ತಲೆಗೂದಲನ್ನು ಬೋಳಿಸುವುದಾಗಲಿ, ಗಿಡ್ಡಗೊಳಿಸುವು ದಾಗಲಿ ಮಾಡಬಾರದು. ಇಹ್ರಾಮ್‌ನಿಂದ ಮುಕ್ತರಾಗಲೂ ಬಾರದು. ಬದಲಾಗಿ ಈದ್ ದಿನದಂದು, ಅಂದರೆ ದುಲ್‌ಹಿಜ್ಜಃ ಹತ್ತರಂದು ಜಮ್ರಃಗಳಿಗೆ ಕಲ್ಲೆಸೆದು ವಿಮುಕ್ತರಾಗುವ ತನಕ ಇಹ್ರಾಮ್‌ನಲ್ಲೇ ಉಳಿಯಬೇಕು. ಹಜ್ಜ್‌ನ ತವಾಫ್ ನಿರ್ವಹಿಸುವ ತನಕ ಹಜ್ಜ್‌ನ ಸಅ್‌ಯನ್ನು ಮುಂದೂಡಿದರೆ ಅದರಲ್ಲಿ ತೊಂದರೆಯಿಲ್ಲ.

3. **ಅಲ್‌ಕಿರಾನ್:** ಉಮ್ರಃ ಮತ್ತು ಹಜ್ಜ್‌ಗಾಗಿ ಇಹ್ರಾಮ್ ಮಾಡುವುದು. ಅಥವಾ ಉಮ್ರಃಕ್ಕಾಗಿ ಮಾತ್ರ ಇಹ್ರಾಮ್ ಮಾಡಿ, ತರುವಾಯ ತವಾಫನ್ನು ಆರಂಭಿಸುವುದಕ್ಕೆ ಮುಂಚೆ ಅದೇ ಇಹ್ರಾಮ್‌ನಲ್ಲಿ ಹಜ್ಜನ್ನು ಪ್ರವೇಶಿಸುವುದು.

ಅಲ್‌ಕಿರಾನ್ ನಿರ್ವಹಿಸುವವರು ಅಲ್‌ಇಫ್ರಾದ್ ನಿರ್ವಹಿಸುವವರು ಮಾಡುವ ಕರ್ಮಗಳನ್ನೇ ಮಾಡಬೇಕು. ಆದರೆ ಅಲ್‌ಕಿರಾನ್ ನಿರ್ವಹಿಸುವವರು ಬಲಿಮೃಗವನ್ನು ಬಲಿ ನೀಡಬೇಕು. ಅಲ್‌ಇಫ್ರಾದ್ ನಿರ್ವಹಿಸುವವರು ಬಲಿ ನೀಡಬೇಕಾಗಿಲ್ಲ.

**ಆಧಾರಗ್ರಂಥಗಳು:**

1. ಫಿಕ್‌ಹುಲ್ ಇಬಾದಾತ್

2. ಮನಾಸಿಕುಲ್ ಹಜ್ಜಿ ವಲ್ ಉಮ್ರಃ

3. ಅಲ್‌ಮನ್‌ಹಜು ಲಿಮುರೀದಿಲ್ ಹಜ್ಜಿ ವಲ್ ಉಮ್ರಃ

4. ಸಿಫತುಲ್ ಹಜ್ಜಿ ವಲ್ ಉಮ್ರಃ

5. ಅಲ್ಲಿಕಾಉ ಶ್ಶಹ್ರೀ (ಸಂಖ್ಯೆ 10)

ಇವೆಲ್ಲವೂ ಅಶ್ಶೈಖ್ ಮುಹಮ್ಮದ್ ಇಬ್ನ್ ಸಾಲಿಹ್ ಅಲ್‌ಉಸೈಮೀನ್‌ರವರ ಗ್ರಂಥಗಳಾಗಿವೆ.

وَصَلَّى اللهُ وَسَلَّم عَلَى نَبِيِّنَا مُحَمَّدٍ وَعَلى آلِهِ وَصَحْبِهِ أَجْمَعِين .

*********